ಸಂಪುಟ 01 | ಸಂಚಿಕೆ 86 | ಸೋಮವಾರ 16 ಫೆಬ್ರವರಿ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
# NAIJYA DESE

ಸತ್ಯದ ದಿಕ್ಕು TRUE PATH
ಕನ್ನಡ ದಿನ ಪತ್ರಿಕೆ
ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ
REGIONAL KANNADA DAILY MORNING
RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ರಾಷ್ಟ್ರೀಯ ಬಾದಾಮಿ ದಿನ National Almond Day

ರಾಷ್ಟ್ರೀಯ ಬಾದಾಮಿ ದಿನ (National Almond Day) ಅನ್ನು ಪ್ರತಿ ವರ್ಷ ಫೆಬ್ರವರಿ 16ರಂದು ಆಚರಿಸಲಾಗುತ್ತದೆ. 2026ರಲ್ಲಿ ಇದು ಸೋಮವಾರ, ಫೆಬ್ರವರಿ 16, 2026 ರಂದು ಬರುತ್ತದೆ.

## ಸುಭಾಷಿತ

ಒಂದು ರಾಷ್ಟ್ರವನ್ನು ಚಿರಕಾಲ ಜನರು ಪ್ರೀತಿಸುವಂತೆ ಮಾಡುವುದು ಭಾಷಾ ಬಂಧನ ಮಾತ್ರ.

–ಪ್ರೇಮ್‌ಚಂದ್

# ಗ್ರಾಮೀಣ ಭಾಗದ ಜ್ವಲಂತ ಸಮಸ್ಯೆಗಳಿಗೆ ಧ್ವನಿಯಾದ ಪಾಟೀಲ್ ನ್ಯೂಸ್ ಸೇವೆ ಶ್ಲಾಘನೀಯ: ಅಭಿನವ ಶ್ರೀ ಸಿದ್ದಬಸವ ಮಹಾಸ್ವಾಮೀಜಿಗಳು

ನೈಜ್ಯ ದೆಸೆ ನ್ಯೂಸ್

ಮಸ್ಕಿ: ತಾಲೂಕಿನ ಹಾಲಾಪೂರ ಗ್ರಾಮದಲ್ಲಿ ಪಾಟೀಲ್ ನ್ಯೂಸ್ ಅಲರ್ಟ್ ಸುದ್ದಿ ಚಾನೆಲ್‌ನ ದ್ವಿತೀಯ ವಾರ್ಷಿಕೋತ್ಸವ ಸಮಾರಂಭವು ಭಾನುವಾರ ವಿಜೃಂಭಣೆಯಿಂದ ನಡೆಯಿತು. ಕಾರ್ಯಕ್ರಮಕ್ಕೆ ಪೂಜ್ಯಶ್ರೀ ಮರಿಬಸವರಾಜ ದೇಸಿಕೇಂದ್ರ ಮಹಾಸ್ವಾಮಿಗಳು (ಉಟಕನೂರು), ಅಭಿನವ ಶ್ರೀ ಸಿದ್ದಬಸವ ಮಹಾಸ್ವಾಮೀ–ಜಿಗಳು (ವಿರಕ್ತಮಠ ಬಳಗನೂರು), ಪರಮಪೂಜ್ಯ ಶ್ರೀ ದಂಡಗುಂಡಪ್ಪ ತಾತ (ಜಂಗಮರಹಳ್ಳಿ), ಪೂಜ್ಯಶ್ರೀ ಮಂಜುನಾಥ ಸ್ವಾಮಿ (ಹಳೆಕೋಟಿ) ಸಾನಿಧ್ಯ ವಹಿಸಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಅಭಿನವ ಶ್ರೀ ಸಿದ್ದಬಸವ ಮಹಾಸ್ವಾಮೀಜಿಗಳು, ಗ್ರಾಮೀಣ ಭಾಗದ ಜ್ವಲಂತ ಸಮಸ್ಯೆಗಳನ್ನು ಹೊರತಂದು, ಸಾಧಕರಿಗೆ ಪ್ರೋತ್ಸಾಹ ನೀಡಿ ಗುರುತಿಸುವ ಕಾರ್ಯದಲ್ಲಿ ಪಾಟೀಲ್ ನ್ಯೂಸ್ ಸೇವೆ ಮಹತ್ತರ ಪಾತ್ರ ವಹಿಸುತ್ತಿದೆ ಎಂದು ಶ್ಲಾಘಿಸಿದರು. ಸಮಾಜಮುಖಿ ಕಾರ್ಯಗಳು ಮಾಧ್ಯಮಗಳ ಪ್ರಮುಖ ಜವಾಬ್ದಾ–ರಿಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.



ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ, ಸಂಗೀತಗಾರರಿಗೆ, ಸ್ಥಳೀಯ ವೈದ್ಯರಿಗೆ, ಗ್ರಾಮ ಪಂಚಾಯತಿ ನೀರುಗಂಟೆ ವಾಟರ್‌ಮ್ಯಾನ್‌ಗಳಿಗೆ, ಪವರ್‌ಮ್ಯಾನ್‌ಗಳಿಗೆ, ಕಳೆದ ವರ್ಷದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತ್ಯಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. ದ್ವಿತೀಯ ಪಿಯುಸಿ ರಾಜ್ಯಶಾಸ್ತ್ರ ವಿಷಯದ ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಸಮಾರಂಭದಲ್ಲಿ ಶ್ರೀ ಚೆನ್ನಯ್ಯ ತಾತ, ಶ್ರೀ ಕರಿಯಪ್ಪ ಹಿರೇಕುರುಬರ, ಬಸಮ್ಮ ಬಸವರಾಜಪ್ಪಗೌಡ, ಶ್ರೀ ಗಣೇಶ ಪೂಜಾರಿ, ಮಲ್ಲಿಕಾರ್ಜುನ ಪಾಟೀಲ (ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು), ಶ್ರೀ ಜಗದೀಶಚಂದ್ರ ಸ್ವಾಮಿ (ಅಧ್ಯಕ್ಷರು, ಕೃಷಿ ಪ್ರಾಥಮಿಕ ಸಹಕಾರ ಸಂಘ), ಕರಿಯಪ್ಪ ಕೆಡಿಪಿ ಸದಸ್ಯರು, ಶಿವಣ್ಣ ನಾಯಕ (ಮಾಜಿ ತಾಲೂಕು ಪಂಚಾಯತ್ ಸದಸ್ಯರು), ಬಿ. ಕರಿಯಪ್ಪ, ನಾರಾಯಣಪ್ಪ ಕಾಸ್ಲಿ (ಮಸ್ಕಿ), ಬಸನಗೌಡ ಹಿರೇಕಡಬೂರು, ಭೀಮಣ್ಣ ನಾಯಕ (ಕಾಚಾಪೂರ), ಮಹಾಂತೇಶ ನಾಯಕ (ಜಾಲವಾಡಿಗಿ), ಬಸವರಾಜ ಗೌಡ (ವಡಗೇರಿ), ಎರಿತಾತ (ಜಂಗಮರಳ್ಳಿ), ಈರನಗೌಡ ದಳಪತಿ, ಬಸಪ್ಪ (ಜಂಗಮರಳ್ಳಿ), ಮರಿಗೌಡ ಮಾಪಾ, ರಾಮರೆಡ್ಡಿ ಸಾಹುಕಾರ, ರವಿ ದೇಸಾಯಿ, ವೆಂಕೋಬ ಪ್ರಾಂಶುಪಾಲರು, ಸುಭಾಷ್ ಸಿಂಗ್ ಮುಖ್ಯಗುರುಗಳು ಸೇ–ರಿದಂತೆ ಹಲವರು ಉಪಸ್ಥಿತರಿದ್ದರು. ನಂತರ ಗಂಗಾವತಿ ಶ್ರೀ ಕೊಟ್ಟೂರೇಶ್ವರ ಸಂಗೀತ ಬಳಗ, ಶ್ಯಾಮ್ ಖಾನಾಪುರ ತಂಡ, ಮೋನಮ್ಮ ಸೋಮನಮರಡಿ (ಜಿ ಟಿವಿ ಸರಿಗಮಪ ಖ್ಯಾತಿ) ಸೇರಿದಂತೆ ಹಲವು ಕಲಾವಿದರು ಸಂಗೀತ, ಗಾಯನ ಮತ್ತು ಹಾಸ್ಯ ಚಟಾಕಿಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದರು. ಕಾರ್ಯಕ್ರಮದ ಸ್ವಾಗತ ಮತ್ತು ನಿರೂಪಣೆಯನ್ನು ಮಂಜುನಾಥ ಶಿಕ್ಷಕರು ಹಾಗೂ ಶ್ರೀಕಾಂತ ಕೆ. ಉಪನ್ಯಾಸಕರು ನಿರ್ವಹಿಸಿದರು.

## ಶ್ರದ್ಧಾಭಕ್ತಿಯಿಂದ ಮಹಾಶಿವರಾತ್ರಿ ಆಚರಣೆ

ನೈಜ್ಯ ದೆಸೆ ನ್ಯೂಸ್

ಮಸ್ಕಿ : ಪದ್ಮಶಾಲಿ (ನೇಕಾರ) ಸಮಾಜದ ಕುಲದೇವರಾಗಿರುವ ಹಾಗೂ ಶಿವನ ಮಹಾನ್ ಭಕ್ತನಾಗಿದ್ದ ಶ್ರೀ ಭಕ್ತ ಮಾರ್ಕಂಡೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಹಬ್ಬವನ್ನು ಭಕ್ತಿಭಾವದಿಂದ ಮತ್ತು ಅತ್ಯಂತ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಬೆಳಿಗ್ಗೆಯಿಂದಲೇ ದೇವಸ್ಥಾನದಲ್ಲಿ ಭಕ್ತರ ಸಂಚಾರ ಹೆಚ್ಚಾಗಿದ್ದು, ವಿಶೇಷ ಪೂಜೆ, ಅಭಿಷೇಕ, ಪುಷ್ಪಾರ್ಚನೆ, ಬಿಲ್ವಾರ್ಚನೆ ಹಾಗೂ ವಿವಿಧ ಧಾರ್ಮಿಕ ವಿಧಿವಿಧಾನಗಳು ನೆರವೇರಿದವು. ಸಂಜೆ ವಿಶೇಷ ಅಲಂಕಾರ ಹಾಗೂ ಮಹಾ ಅಭಿಷೇಕ ಕಾರ್ಯಕ್ರಮಗಳು ನಡೆದವು. ಭಕ್ತರು ಜಾಗರಣೆ ಮಾಡಿ ರಾತ್ರಿ ಪೂರ್ತಿ ಭಜನೆ, ಶಿವನಾಮಸ್ಮರಣೆ ಹಾಗೂ ಪೂಜೆಗಳಲ್ಲಿ ತೊಡಗಿಸಿಕೊಂಡರು.ಈ ಪವಿತ್ರ ಸಂದರ್ಭದಲ್ಲಿ ಶಿವನ ಕೃಪೆಗೆ ಪಾತ್ರರಾಗುವ ಉದ್ದೇಶದಿಂದ ನೂರಾರು ಭಕ್ತರು ಉಪವಾಸ ವ್ರತ ಕೈಗೊಂಡು ಪೂಜೆ ಸಲ್ಲಿಸಿದರು. ಮಹಿಳೆಯರು ಮತ್ತು ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಶೋಭೆಯನ್ನು ಹೆಚ್ಚಿಸಿದರು.ಕಾರ್ಯಕ್ರಮದಲ್ಲಿ ಸಮಾಜದ ಅಧ್ಯಕ್ಷ ಲಕ್ಷ್ಮಣ ಕರ್ಲಿ, ಪರಶುರಾಮ ಕೊಡಗುಂಟಿ, ಡಾ. ಶಂಕರ ಕರ್ಲಿ, ಮಲ್ಲಯ್ಯ ಪಗಡೇಕಲ್, ವೀರೇಶ ಪೂಜಾರಿ, ಮಲ್ಲಿಕಾರ್ಜುನ ಶ್ಯಾಸಲ್, ಪರಶುರಾಮ ದೇವರಡ್ಡಿ, ನರಸಿಂಹ ಪಗಡೇಕಲ್, ಬಸವರಾಜ ಪಗಡೇಕಲ್, ಕನಕಾಚಲ ಪೂಜಾರಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.ಅತಿಥಿಗಳು ಮಹಾಶಿವರಾತ್ರಿಯ ಮಹತ್ವ ಕುರಿತು ಮಾತನಾಡಿ, ಭಕ್ತಿಭಾವ, ಸಂಸ್ಕೃತಿ ಮತ್ತು ಸಮಾಜದ ಏಕತೆಗೆ ಇಂತಹ ಆಚರಣೆಗಳು ಸಹಕಾ–ರಿಯಾಗುತ್ತವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.ಕಾರ್ಯಕ್ರಮದ ಕೊನೆಯಲ್ಲಿ ಭಕ್ತರಿಗೆ ಪ್ರಸಾದ ವಿತರಣೆ ಮಾಡಲಾಗಿದ್ದು, ಎಲ್ಲರೂ ಶಾಂತಿ, ಸೌಹಾರ್ದತೆಯೊಂದಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.



ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ 9902277588

# ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕು ವ್ಯಾಪ್ತಿಯ ಹೊಸೂರು ಸಿದ್ದಾಪುರ–ಜಾಲಹಳ್ಳಿ

ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ : ಗ್ರಾಮದಲ್ಲಿ ಇಂದು 15.02.2026, ರವಿವಾರ ಶ್ರೀ ಪರಮಪೂಜ್ಯ ಗವಿಸಿದ್ದೇಶ್ವರ ತಾತನವರ 31ನೇ ರಥೋತ್ಸವ ಜಾತ್ರಾ ಮಹೋತ್ಸವ ಹಾಗೂ ಮೂರನೇ ವರ್ಷದ ಲಕ್ಷ ದೀಪೋತ್ಸವ ಕಾರ್ಯಕ್ರಮ ಭಕ್ತಿಭಾವದಿಂದ ಜರುಗುತ್ತಿದೆ.ಇಂದು ರಾಯಚೂರು ಜಿಲ್ಲೆಯ ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಎಚ್. ಸಿದ್ದಾಪುರ–ಜಾಲಹಳ್ಳಿ ಗ್ರಾಮದಲ್ಲಿರುವ ಗವಿಸಿದ್ದೇಶ್ವರ ಮಠದಲ್ಲಿ ನಡೆಯುತ್ತಿರುವ ಈ ಮಹೋತ್ಸವದಲ್ಲಿ ಸಾವಿರಾರು ಭಕ್ತರು ಭಾಗವಹಿಸಿದ್ದಾರೆ. ಇಂದಿನಿಂದ ಪ್ರತಿದಿನ ರಾತ್ರಿ 8 ಗಂಟೆಗೆ ಪಲ್ಲಕ್ಕಿ ಮೆರವಣಿಗೆ ನಡೆಯಲಿದೆ.ಫೆಬ್ರವರಿ 17ರಂದು ವಿವಿಧ ಕಾರ್ಯಕ್ರಮಗಳಾದ ಆಟ, ಕಬಡ್ಡಿ ಹಾಗೂ ಉಸುಕಿನ ಚೀಲ ಎತ್ತುವ ಸ್ಪರ್ಧೆಗಳನ್ನೂ ಆಯೋಜಿಸಲಾಗಿದೆ ಎಂದು ತಾತನವರು ತಿಳಿಸಿದ್ದಾರೆ.ಈ ಸಂದರ್ಭದಲ್ಲಿ ಮಾತನಾಡಿದ ಮಹಾದಾಸೋಹಿ ಪರಮಾತ್ಮ ತಾತನವರು, “ಸುಮಾರು 40 ವರ್ಷಗಳಿಂದ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದು, ಕಳೆದ 30 ವರ್ಷಗಳಿಂದ




ಪ್ರತಿದಿನ ಅನ್ನದಾಸೋಹ ನಡೆಸುತ್ತಾ ಬಂದಿದ್ದೇನೆ. ಬಡವರು, ದೀನ ದಲಿತರು ಯಾರೇ ಸಹಾಯ ಕೇಳಿದರೂ ನೆರವು ನೀಡುವುದು ನನ್ನ ಧರ್ಮ,” ಎಂದರು. ಮುಖಂಡ ಚಂದಪ್ಪ ಬುದ್ದಿನ್ನಿ ಮಾತನಾಡಿ, “ರಸ್ತೆಯೇ ಇಲ್ಲದ ಸಮಯದಲ್ಲಿ ತಾತನವರು ಇಲ್ಲಿ ನೆಲೆಸಿ ಮಠದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಉತ್ತಮ ರಸ್ತೆ, ಅನ್ನದಾಸೋಹ, ಸಾಮೂಹಿಕ ವಿವಾಹ ಸೇರಿದಂತೆ ಅನೇಕ ಸಾಮಾಜಿ–ಕ ಕಾರ್ಯಗಳನ್ನು ನಡೆಸಿ ಗ್ರಾಮಕ್ಕೆ ಹೆಸರು ತಂದಿದ್ದಾರೆ,” ಎಂದು ಹೇಳಿದರು.ಭೀಮಣ್ಣ ಗುಮ್ಮಿದಾರ್ ಮಾತನಾಡಿ, “31 ವರ್ಷಗಳಿಂದ ರಥೋತ್ಸವ ಹಾಗೂ ಮೂರನೇ ವರ್ಷದ ಲಕ್ಷ ದೀಪೋತ್ಸವವನ್ನು ಯಶಸ್ವಿಯಾಗಿ ನಡೆಸುತ್ತಿರುವ ತಾತನವರ ಮಠಕ್ಕೆ ಸರ್ಕಾರದಿಂದ ಅನುದಾನ ನೀಡಬೇಕು. ಶಾಲೆ, ಕೋಣೆ ನಿರ್ಮಾಣ ಹಾಗೂ ಅನ್ನದಾಸೋಹಕ್ಕೆ ನೆರವು ನೀಡಬೇಕಾಗಿದೆ,” ಎಂದು ಒತ್ತಾಯಿಸಿದರು.ಮಾನಪ್ಪ ಕವಲಿ ಹೊಸೂರು ಸಿದ್ದಾಪುರ ಮಾತನಾಡಿ, “ನೀರು ಇಲ್ಲದ ಸಮಯದಲ್ಲಿ ತಾತನವರು ಬಾವಿ ತೋರಿಸಿ ಸಾರ್ವಜನಿಕರಿಗೆ ನೀರಿನ ಸೌಲಭ್ಯ ಕಲ್ಪಿಸಿದರು. ಮಠದ ಸುತ್ತಮುತ್ತ ಪುರಾತನ ಕೋಟೆಯ ಅವಶೇಷಗಳಿವೆ,” ಎಂದು ತಿಳಿಸಿದರು.ಶಿವನಗೌಡ ಜಾಲಹಳ್ಳಿ ಮಾತನಾಡಿ, “40 ವರ್ಷಗಳಿಂದ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡಿರುವ ತಾತನವ–ರಿಗೆ ಶಾಸಕರಾದ ಕರಿಯಮ್ಮ ನಾಯಕ್ ಅವರು ಎರಡು ಬೋರವೆಲ್ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಇನ್ನೂ ಹೆಚ್ಚಿನ ಸಹಾಯ ಮಾಡುವುದಾಗಿ ತಿಳಿಸಿದ್ದಾರೆ,” ಎಂದರು. ತಾತಪ್ಪ ಪತ್ರಕರ್ತರು ಮಾತನಾಡಿ, “ಪ್ರತಿದಿನ ಮಠಕ್ಕೆ ಬರುವ ಭಕ್ತರಿಗೆ ಅನ್ನದಾಸೋಹ ವ್ಯವಸ್ಥೆ ಮಾಡಲಾಗುತ್ತಿದೆ. ಉತ್ತರ ಕರ್ನಾಟಕದ ಪ್ರಮುಖ ಗವಿಸಿದ್ದೇಶ್ವರ ಮಠಗಳಲ್ಲಿ ಇದು ಒಂದು,” ಎಂದು ಹೇಳಿದರು.ಮಹೇಂದ್ರ ಕುಮಾರ್ ಹಾಗೂ ಶಿವರಾಜ್ ಅವರು, “ಇಂದು ನಡೆಯುವ ರಥೋತ್ಸವ ಮತ್ತು ಲಕ್ಷ ದೀಪೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಬೇಕು,” ಎಂದು ಮನವಿ ಮಾಡಿದರು.ಈ ಸಂದರ್ಭದಲ್ಲಿ ಚಂದಪ್ಪ ಬುದ್ದಿನ್ನಿ, ಭೀಮಣ್ಣ ಗುಮ್ಮಿದಾರ್, ಮಾನಪ್ಪ ಕವಲಿ, ಮಹೇಂದ್ರ ಕುಮಾರ್, ಶಿವನಗೌಡ ಜಾಲಹಳ್ಳಿ, ಶಿವರಾಜ್, ಮಾನಪ್ಪ ಚಿಂಚೋಡಿ, ತಾತಪ್ಪ ಪತ್ರಕರ್ತರು, ಲಿಂಗಣ್ಣ ಮಕ್ಕಾಸಿ ನಾಯಕ್ ಸೇರಿದಂತೆ ಹೊಸೂರು ಸಿದ್ದಾಪುರ–ಜಾಲಹಳ್ಳಿ ಗ್ರಾಮದ ನೂರಾರು ಭಕ್ತರು ಹಾಜರಿದ್ದರು.

ವರದಿ:
ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

# ಮಸ್ಕಿ ತಾಲೂಕಿನ ವಿವಿಧೆಡೆ ಸಂತ ಸೇವಾಲಾಲ್ ಜಯಂತಿ ಆಚರಣೆ



ನೈಜ್ಯ ದೆಸೆ ನ್ಯೂಸ್

ಮಸ್ಕಿ: ಪಟ್ಟಣದಲ್ಲಿ ತಾಲೂಕಾಡಳಿತದಿಂದ ಸಂತ ಸೇವಾಲಾಲ್ 287ನೇ ಜಯಂತಿಯನ್ನು ಭಾನುವಾರ ಆಚರಿಸಲಾಯಿತು.ತಹಸೀಲ್ದಾರ್ ಕಾರ್ಯಾಲಯದಲ್ಲಿ ತಾಲೂಕಾಡಳಿತದಿಂದ ಸಂತ ಸೇವಾಲಾಲ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡುವ ಮೂಲಕ ಜಯಂತಿ ಆಚರಿಸಿದರು. ಬಂಜಾರ ಸಮಾಜದಿಂದ ಮುದಗಲ್ ಕ್ರಾಸ್‌ನಲ್ಲಿರುವ ಸಂತ ಸೇವಾಲಾಲ್ ವೃತ್ತದ ನಾಮಫಲಕಕ್ಕೆ ಖಾದಿ ಗ್ರಾಮೋದ್ಯೋಗ ನಿಗಮದ ಅಧ್ಯಕ್ಷ ಶಾಸಕ ಆರ್.ಬಸನಗೌಡ ಮತ್ತು ಮಾಜಿ ಮಾಜಿ ಪ್ರತಾಪಗೌಡ ಪಾಟೀಲ್ ಮಾಲಾರ್ಪಣೆ ಮಾಡಿದರು. ವಿವಿಧೆಡೆ ಆಚರಣೆ: ಪುರಸಭೆ ಕಾರ್ಯಾಲಯ, ನಗರ ಯೋಜನಾ ಪ್ರಾಧಿಕಾರ ಕಚೇರಿ, ನೀರಾವರಿ ಇಲಾಖೆ, ಭೂ–ದಾಖಲೆಗಳ ಇಲಾಖೆ, ರೈತ ಸಂಪರ್ಕ ಕೇಂದ್ರ, ಶಾಸಕರ ಕಾರ್ಯಾಲಯ, ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷದ ಕಾರ್ಯಾಲಯಗಳಲ್ಲಿ ಸೇ–ರಿದಂತೆ ವಿವಿಧ ಸರಕಾರಿ ಶಾಲಾ–ಕಾಲೇಜ್ ಮತ್ತು ಸರಕಾರಿ ಇಲಾಖೆಗಳಲ್ಲಿ ಸಂತ ಸೇವಾಲಾಲ್ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಿದ್ದಾರೆ. ಈ ಸಂದರ್ಭದಲ್ಲಿ ಬಂಜಾರ ಸಮಾಜದ ಮುಖಂಡ–ರಿದ್ದರು. ಮಸ್ಕಿ ಪಟ್ಟಣದಲ್ಲಿ ಸಂತ ಸೇವಾಲಾಲ್ ಜಯಂತಿಯನ್ನು ಭಾನುವಾರ ಆಚರಿಸಿದರು.

# ಸಮಾಜದ ಸರ್ವಾಂಗೀಣ ಪ್ರಗತಿಗೆ ಒಗ್ಗಟ್ಟು ಅಗತ್ಯ: ಶಾಸಕ ನಾಡಗೌಡ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಸಮಾಜದಲ್ಲಿ ಆರ್ಥಿಕ, ರಾಜ–ಕೀಯ ಹಾಗೂ ಸಾಮಾಜಿಕವಾಗಿ ಹಿಂದುಳಿದಿರುವ ಸಣ್ಣ ಸಮುದಾಯಗಳನ್ನು ಮುಖ್ಯವಾಹಿನಿಗೆ ತರುವ ಕಾರ್ಯ ನಡೆಯಬೇಕಾಗಿದೆ ಎಂದು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ ಅಪ್ಪಾಜಿ ನಾಡಗೌಡ ಹೇಳಿದರು. ರವಿವಾರ ಪಟ್ಟಣದ ವಿದ್ಯಾಭಾರತಿ ಪ್ರೌಢಶಾಲೆ ಆವರಣದಲ್ಲಿ ಶ್ರೀ ನಿಜ ಶರಣ ಅಂಬಿಗರ ಚೌಡಯ್ಯ ತಾಲೂಕು ಘಟಕದ ವತಿಯಿಂದ ಆಯೋಜಿಸಿದ್ದ ಅಂಬಿಗರ ಚೌಡಯ್ಯನವರ ಪ್ರತಿಮೆ ಅನಾವರಣ, ನೂತನ ಸಭಾಭವನ ಉದ್ಘಾಟನೆ ಹಾಗೂ ಅನುಭವ ಮಂಟಪ ಶಂಕುಸ್ಥಾಪನೆ ಕಾರ್ಯಕ್ರಮದ ಧರ್ಮಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.ಮುದ್ದೇಬಿಹಾಳ ಪಟ್ಟಣದಲ್ಲಿಯೂ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಸ್ಥಳ ಹಾಗೂ ಅನುದಾನ ನೀಡುವುದಾಗಿ



ಭರವಸೆ ನೀಡಿದ ಅವರು, ಸಮಾಜವನ್ನು ಎಸ್‌ಟಿ ವರ್ಗಕ್ಕೆ ಸೇರಿಸುವ ಬೇಡಿಕೆಯನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರಲು ಬಜೆಟ್ ಅಧಿವೇಶನದಲ್ಲಿ ಮಾತಾಡುವುದಾಗಿ ಹೇಳಿದರು. “ನಾನು ಸದಾ ನಿಮ್ಮ ಜೊತೆಯಲ್ಲೇ ಇದ್ದು ಸಮಾಜದ ಏಳಿಗೆಗಾಗಿ ಶಕ್ತಿಮೀರಿ ಕೆಲಸ ಮಾಡುತ್ತೇನೆ. ಯಾವುದೇ ಕಾರಣಕ್ಕೂ ಸಮಾಜದ ಒಗ್ಗಟ್ಟು ಕೆಡದಂತೆ ನೋಡಿಕೊಳ್ಳಿ. ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ಉತ್ತಮ ಸಂಸ್ಕಾರ ಬೆಳೆಸಿರಿ” ಎಂದು ಕರೆ ನೀಡಿದರು. ದೇವರಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ ಮಾತನಾಡಿ, ಅಂಬಿಗರ ಚೌಡಯ್ಯನವರು ಮಹಾನ್ ಶರಣರಾಗಿದ್ದು ಬಸವಣ್ಣ ಅವರ ಸಾಮಾಜಿಕ ಕ್ರಾಂತಿಯಲ್ಲಿ ಅಪಾರ ಕೊಡುಗೆ ನೀಡಿದ್ದಾರೆ. ಅವರ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ; ಅವುಗಳನ್ನು ಯುವಜನತೆಗೆ ಪರಿಚಯಿಸುವ ಅಗತ್ಯವಿದೆ ಎಂದರು.ರಾಜ್ಯ ಕೋಲಿ ಗಂಗಾಮತ ಸಮಾಜದ ಮಾಜಿ ಅಧ್ಯಕ್ಷ ಬಿ.ಕೆ. ಮೋಹನ ಕುಮಾರ ಮಾತನಾಡಿ, ರಾಜ್ಯ ರಾಜಕೀಯದಲ್ಲಿ ನಮ್ಮ ಸಮಾಜ ನಿರ್ಣಾಯಕ ಪಾತ್ರ ವಹಿಸುತ್ತಿದ್ದರೂ ನಿರಂತರ ನಿರ್ಲಕ್ಷ್ಯವಾಗುತ್ತಿದೆ. ವಿಧಾನಸಭೆಯ ಮುಂದೆ ಅಂಬಿಗರ ಚೌಡಯ್ಯನವರ ಮೂರ್ತಿ ಪ್ರತಿಷ್ಠಾಪನೆ ಹಾಗೂ ಎಸ್‌ಟಿ ಮೀಸಲಾತಿಗೆ ಕೇಂದ್ರಕ್ಕೆ ಶಿಫಾರಸ್ಸು ಮಾಡುವುದು ನಮ್ಮ ಪ್ರಮುಖ ಬೇಡಿಕೆಗಳಾಗಿವೆ. ಇದಕ್ಕಾಗಿ ಮಾನ್ಯ ಶಾಸಕರು ಪ್ರಯತ್ನಿಸಬೇಕು ಎಂದು ಒತ್ತಾಯಿಸಿದರು. ಕಾರ್ಯಕ್ರಮದಲ್ಲಿ ಪೀಠಾಧ್ಯಕ್ಷರಾದ ಶ್ರೀ ಶಾಂತಭೀಷ್ಮ ಚೌಡಯ್ಯ ಮಹಾಸ್ವಾಮಿಗಳು ಹಾಗೂ ಶ್ರೀ ಸಿದ್ಧಲಿಂಗ ದೇವರು ಸಾನಿಧ್ಯವಹಿಸಿ ಆಶೀರ್ವಚನ ನೀಡಿದರು. ತಾಲೂಕು ಅಧ್ಯಕ್ಷ ಪರಶುರಾಮ ಬಿ. ತಂಗಡಗಿ ಅಧ್ಯಕ್ಷತೆ ವಹಿಸಿದ್ದರು.ಈ ಸಂದರ್ಭದಲ್ಲಿ ಮಾಜಿ ಶಾಸಕ ಶರಣಪ್ಪ ಸುಣಗಾರ, ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಶಿವಕುಮಾರ ನಾಟೀಕಾರ, ಸಾಮಾಜಿಕ ಹೋರಾಟಗಾರ ಶಿವಾಜಿ ಮೆಟಗಾರ, ರಾಜ್ಯ ಬುಡಕಟ್ಟು ಜನಾಂಗ ಸಂರಕ್ಷಣಾ ಸಮಿತಿ ಅಧ್ಯಕ್ಷ ಅಮರೇಶಣ್ಣ ಕಾಮನಕೇರಿ, ಎಚ್.ಎಸ್. ಪಾಟೀಲ, ಪ್ರಭುಗೌಡ ಮದರಕಲ್, ಶಶಿಕಾಂತ ಮೂಕಿಹಾಳ, ರಮೇಶ ಮೂಕಿಹಾಳ ಸೇರಿದಂತೆ ಸಮಾಜದ ಗಣ್ಯರು ಮತ್ತು ಹಿರಿಯರು ಉಪಸ್ಥಿತರಿದ್ದರು.



## ಸಾಹಿತ್ಯ ಸಿಂಚನ

" ಶಿವಂ ಸತ್ಯಂ ಸುಂದರಂ..!
ಜಟೆಯಲಿ ಚಂದಿರ ಕೊರಳಲಿ ನಾಗರ
ಭಸ್ಮಾಂಬರಧರ ನಮ್ಮಯ ಶಿವಶಂಕರ
ಡಮರುಗದ ಶ್ರೀಕರ ನಂದಿಯ ಸವಾರ
ಮೃತ್ಯುಂಜಯ ನಮ್ಮಯ ಈ ಗೌರೀಶ್ವರ.!

ಜಗವುಳಿಸಲು ನಂಜುಂಡ ನಂಜುಡೇಶ್ವರ
ದಿಗ್ದಿದಿಗಂತಗಳೇ ಮನೆಯೆಂದ ದಿಗಂಬರ
ಬಯಲನೆ ಆಲಯವಾಗಿಸಿದ ಶರಣೇಶ್ವರ
ಜಂಗಮ ಸಂಗವೆ ಜಗವೆಂದ ಜಗದೀಶ್ವರ.!

ಭಕ್ತರಾಧೀನ ಭಕ್ತಬಂಧು ಭಕ್ತಪ್ರಿಯೇಶ್ವರ
ಶರಣಾಗತ ವತ್ಸಲ ಶ್ರೀಶರಣ ಕರುಣಾಕರ
ತಾಂಡವನೃತ್ಯ ಪ್ರಿಯ ನಟರಾಜ ಈಶ್ವರ
ನಾಟ್ಯಗುರು ನರ್ತನಕಾರ ನಾಟ್ಯಶಂಕರ.!

ತನ್ನಾತ್ಮಲಿಂಗವನೆ ನೀಡಿನಿಂತ ದಯಾಕರ
ಮಾರ್ಕಂಡೇಯನ ತಲೆ ಕಾದ ಮಹೇಶ್ವರ
ಬೇಡರಕಣ್ಣಪ್ಪನ ಭಕ್ತಿಗೊಲಿದ ಓಹಿಲೇಶ್ವರ
ನಿರ್ಮಲ ಜಪತಪಕೊಲಿವ ನೀಲಕಂಠೇಶ್ವರ.!

ಪಾರ್ವತಿ ಪ್ರೀತಿಗೊಪ್ಪಿ ಅಪ್ಪಿದ ಗಿರಿಜೇಶ್ವರ
ಗಂಗೆಗೆ ಶಿರದಲ್ಲೇ ಜಾಗವಕೊಟ್ಟ ಗಂಗಾಧರ
ಗಣಪನಿಗೆ ಮರುಜೀವವಿತ್ತ ಮಹಾಕಾಳೇಶ್ವರ
ರಜತಗಿರಿಯೊಡೆಯ ಕೈಲಾಸಪತಿ ಶಿವೇಶ್ವರ.!

ತ್ರಿನೇತ್ರ ಹಣೆಗಣ್ಣ ದುಷ್ಟಶಿಕ್ಷಕ ರುದ್ರೇಶ್ವರ
ಪ್ರಳಯಕಾರಕ ಅಸುರರ ಕುಲಾಂತಕ ಹರ
ತ್ರಿಶೂಲಧಾರಿ ಉಗ್ರಪ್ರತಾಪಿ ಅರಿಭಯಂಕರ
ಲಯಕಾರಕ ಕಾಲಜ್ಞಾನಿ ಕಾಲಭೈರವೇಶ್ವರ.!

ಲಿಂಗರೂಪಿ ನಿರಾಕಾರ ನಿಜಗುಣ ಸರ್ವೇಶ್ವರ
ಸಮ ಸಮಾನತೆ ನಿದರ್ಶನ ಅರ್ಧನಾರೀಶ್ವರ
ಅರಿವು ಅನುಭಾವದ ದಿಗ್ದರ್ಶನ ಜ್ಯೋತೀಶ್ವರ
ನಿರ್ಮೋಹ ನಿರ್ವಿಕಾರ ಪ್ರತೀಕ ಪ್ರಾಣೇಶ್ವರ.!

-ಎ.ಎನ್.ರಮೇಶ್.ಗುಬ್ಬಿ.

## ಕಾರುಣ್ಯಾಶ್ರಮಕ್ಕೆ "ಸದ್ಗುರು ಶ್ರೀ ವಿರೂಪಾಕ್ಷೇಶ್ವರ ಕೃಪಾಭೂಷಣ" ಪ್ರಶಸ್ತಿ ಪ್ರದಾನ

ನೈಜ್ಯ ದೆಸೆ ನ್ಯೂಸ್




ಮಾನ್ವಿ: ಮಹಾಶಿವರಾತ್ರಿಯ ಗಾರಿಗೆ ಜಾತ್ರಾ ಮಹೋತ್ಸವದ ಅಂಗವಾಗಿ ಮಾನ್ವಿ ನಗರದ ಕಲ್ಮಠದಲ್ಲಿ ಭಕ್ತಿಭಾವಭರಿತವಾಗಿ ವಿಶೇಷ ಸಮಾರಂಭ ಜರುಗಿತು. ಸಮಾಜಸೇವೆಯಲ್ಲಿ ಗಮನಾರ್ಹ ಕೊಡುಗೆ ನೀಡುತ್ತಿರುವ ಸಿಂಧನೂರು ನಗರದ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮಕ್ಕೆ "ಸದ್ಗುರು ಶ್ರೀ ವಿರೂಪಾಕ್ಷೇಶ್ವರ ಕೃಪಾಭೂಷಣ" ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಕಾರುಣ್ಯಾಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸಯ್ಯಸ್ವಾಮಿ ಹಿರೇಮಠ ಹಾಗೂ ಸುಜಾತ ಹಿರೇಮಠ ದಂಪತಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪ್ರಶಸ್ತಿಯೊಂದಿಗೆ ಇಪ್ಪತ್ತೈದು ಸಾವಿರ ರೂಪಾಯಿಗಳ ನಗದು ಬಹುಮಾನವನ್ನು ವಿತರಿಸಿ ಅವರ ಸೇವೆಯನ್ನು ಸನ್ಮಾನಿಸಲಾಯಿತು.ಕಾರ್ಯಕ್ರಮವು ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು (ಮಾನ್ವಿ ಕಲ್ಮಠ), ಅಭಿನವ ರೇಣುಕಾ ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು (ಶ್ರೀ ಶಾಂಭವಿ ಸುಕ್ಷೇತ್ರ ನೀಲಗಲ್ ಗಣೇಕಲ್) ಕಲ್ಯಾಣ ಮಹಾಸ್ವಾಮಿಗಳು (ಕಲ್ಯಾಣ ಮಠ, ಬಳ್ಳಾರಿ ಕಮ್ಮರಚೇಡು), ವೀರಸಂಗಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು (ಮಂಗಳವಾರಪೇಟೆ, ರಾಯಚೂರು) ಅವರ ದಿವ್ಯ ಸಾನಿಧ್ಯದಲ್ಲಿ ನೆರವೇರಿತು. ಅನುರಾಧ ಚಿಂತಕರು (ಬಳ್ಳಾರಿ), ದಲಿತ ಸಂಘರ್ಷ ಸಮಿತಿ ಮುಖಂಡ ಪ್ರಭುರಾಜ ಕೊಡ್ಲಿ (ಮಾನ್ವಿ) ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತ-ರಿದ್ದರು.ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ (ಕರಡಕಲ್), "ನಮ್ಮ ಕಾರುಣ್ಯ ಸಂಸ್ಥೆಯ ಅನಾಥಪರ ಹಾಗೂ ವೃದ್ಧಪರ ಸೇವೆಯನ್ನು ಗುರುತಿಸಿ ಮಾನ್ವಿ ಕಲ್ಮಠದ ಪೂಜ್ಯ ಶ್ರೀಗಳು 'ಸದ್ಗುರು ಶ್ರೀ ವಿರೂಪಾಕ್ಷೇಶ್ವರ ಕೃಪಾಭೂಷಣ' ಪ್ರಶಸ್ತಿಯನ್ನು ನೀಡಿ ಆಶೀರ್ವದಿಸಿರುವುದು ನಮ್ಮ ಸೇವೆಗೆ ಮತ್ತಷ್ಟು ಬಲ ನೀಡಿದೆ. ಈ ಗೌರವ ನಮ್ಮ ಸಂಸ್ಥೆಗೆ ಸಹಾಯ ಮಾಡಿದ ಹಾಗೂ ಮುಂದೆಯೂ ಸಹಕಾರ ನೀಡುವ ಎಲ್ಲಾ ದಾನಿಗಳಿಗೆ ಸಮರ್ಪಿತವಾಗಿದೆ," ಎಂದು ಹೇಳಿದರು.ಈ ಗೌರವವು ಬಸವಾದಿ ಶರಣರ ಹರ-ಗುರು ಚರಮೂರ್ತಿಗಳ ಆಶೀರ್ವಾದದ ಫಲವೆಂದು ಅವರು ತಿಳಿಸಿದರು. ಕಾರುಣ್ಯ ಕುಟುಂಬದ ಪ್ರಾಮಾಣಿಕ ಸೇವೆಗೆ ಈ ಪ್ರಶಸ್ತಿ ಹೊಸ ಉತ್ತೇಜನ ನೀಡಿದ್ದು, ಇನ್ನಷ್ಟು ಸಾಮಾಜಿಕ ಜವಾಬ್ದಾರಿಯನ್ನು ನಿಭಾಯಿಸುವ ಸಂಕಲ್ಪ ವ್ಯಕ್ತಪಡಿಸಿದರು.ಅಕ್ಷಯ ಆಹಾರ ಜೋಳಿಗೆ ಸೇವಾ ಟ್ರಸ್ಟ್‌ನ ಸಂಸ್ಥಾಪಕರಾದ ಅಶೋಕ ನಲ್ಲ ಅವರ ನಿರಂತರ ಸಹಕಾರ, ಹಾಗು ಸಿಂಧನೂರು ಮತ್ತು ರಾಯಚೂರು ಜಿಲ್ಲೆಯ ವಿವಿಧ ಸಂಘ-ಸಂಸ್ಥೆಗಳ ಬೆಂಬಲವೇ ಕಾರುಣ್ಯ ಕುಟುಂಬದ ಸೇವೆಗೆ ಮೂಲ ಶಕ್ತಿಯಾಗಿದೆ ಎಂದು ಹೇಳಿದರು.ಕಾರ್ಯಕ್ರಮದ ಅಂತ್ಯದಲ್ಲಿ ಮಾನ್ವಿ ಕಲ್ಮಠದ ಪೂಜ್ಯ ವಿರೂಪಾಕ್ಷ ಪಂಡಿತಾರಾಧ್ಯ ಮಹಾಸ್ವಾಮಿಗಳಿಗೆ, ಗಾರಿಗೆ ಜಾತ್ರಾ ಮಹೋತ್ಸವ ಸಮಿತಿಯ ಪದಾಧಿಕಾರಿಗಳಿಗೆ, ಮಾನ್ವಿ ಕಲ್ಮಠದ ಆಯುರ್ವೇದ ಕಾಲೇಜಿನ ಪ್ರಾಂಶುಪಾಲರು, ಅಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಅಪಾರ ಶಿಷ್ಯವೃಂದಕ್ಕೆ ಸಿಂಧನೂರಿನ ಕಾರುಣ್ಯ ಕುಟುಂಬದಿಂದ ಕೃತಜ್ಞತಾ ನಮನಗಳನ್ನು ಸಲ್ಲಿಸಲಾಯಿತು.ಈ ಪ್ರಶಸ್ತಿ ಪ್ರದಾನವು ಸಮಾಜ ಸೇವೆಯ ಮಹತ್ವವನ್ನು ಮತ್ತೊಮ್ಮೆ ಸಾರಿದ್ದು, ಮಾನವೀಯ ಮೌಲ್ಯಗಳ ಉಳಿವು ಮತ್ತು ವೃದ್ಧಿಗೆ ಪ್ರೇರಣೆಯಾಗಿ ಪರಿಣಮಿಸಿತು.

## ಮಾಜಿ ಯೋಧರಿಂದ ಪುಲ್ವಾಮಾದಲ್ಲಿ 2019ರಲ್ಲಿ ನಡೆದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ ಹುತಾತ್ಮರಾದ 40 ಸಿಆರ್‌ಪಿಎಫ್ ಯೋಧರಿಗೆ ಗೌರವ ನಮನ

ನೈಜ್ಯ ದೆಸೆ ನ್ಯೂಸ್




ರಾಯಚೂರು : ಪುಲ್ವಾಮಾದಲ್ಲಿ 2019ರಲ್ಲಿ ನಡೆದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ ಹುತಾತ್ಮರಾದ 40 ಸಿಆರ್‌ಪಿಎಫ್ ಯೋಧರಿಗೆ ಇಲ್ಲಿನ ಬಸವೇಶ್ವರ ವೃತ್ತದಲ್ಲಿ ಶನಿವಾರ ಮಾಜಿ ಯೋಧರು ಗೌರವ ನಮನ ಸಲ್ಲಿಸಿದರು.ಪುಲ್ವಾಮಾ ಭಯೋತ್ಪಾದಕ ದಾಳಿಯಲ್ಲಿ ಹುತಾತ್ಮರಾದ ಯೋಧರಿಗೆ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳ ಮಾಜಿ ಯೋಧರ ಕ್ಷೇಮಾಭಿವೃದ್ಧಿ ಸಂಘದಿಂದ ಏಳನೇ ವರ್ಷದ ಗೌರವ ಸಮರ್ಪಣೆ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.ಮಾಜಿ ಯೋಧರು ಪುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ ವೀರ ಯೋಧರ ಭಾವಚಿತ್ರಗಳನ್ನು ಹಿಡಿದು ನಗರದ ಬಸವೇಶ್ವರ ವೃತ್ತದಿಂದ ಅಂಬೇಡ್ಕರ್ ವೃತ್ತದವರೆಗೂ ಪಾದಯಾತ್ರೆ ಮಾಡುವ ಮೂಲಕ ಅವರ ತ್ಯಾಗ-ಬಲಿದಾನ ಸ್ಮರಿಸಿದರು.'ಜೈ ಜವಾನ್, ಜೈ ಕಿಸಾನ್', 'ಭಾರತ್ ಮಾತಾಕಿ ಜೈ', 'ವಂದೇ ಮಾತರಂ', 'ವೀರ ಯೋಧರು ಅಮರರಾಗಲಿ' ಎಂಬ ಘೋಷಣೆಗಳನ್ನು ಕೂಗಿದರು.ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಕೃಷ್ಣಮೂರ್ತಿ ಮಾತನಾಡಿ, '2019ರ ಪುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ 40 ವೀರ ಯೋಧರನ್ನು ಸ್ಮರಿಸುವ ಸಲುವಾಗಿ ಪ್ರತಿ ವರ್ಷ ಫೆ.14ರಂದು ನಾವು ಇಲ್ಲಿ ಸೇರಿ ಹುತಾತ್ಮ ಯೋಧರ ತ್ಯಾಗ ಹಾಗೂ ಬಲಿದಾನವನ್ನು ಹೃದಯಾಂತರಾಳದಿಂದ ಸ್ಮ-ರಿಸುತ್ತೇವೆ' ಎಂದು ಹೇಳಿದರು.'ಯೋಧರ ತ್ಯಾಗ-ಬಲಿದಾನ, ಹೋರಾಟ ನಮ್ಮೆಲ್ಲ-ರಿಗೂ ಮಾರ್ಗದರ್ಶಕವಾಗಿದ್ದು, ನಿತ್ಯ ಹೋರಾಟಗಾರರ ತ್ಯಾಗ ಮತ್ತು ಬಲಿದಾನ ಸ್ಮ-ರಿಸುವುದು ನಮ್ಮೆಲ್ಲರ ಕರ್ತವ್ಯ' ಎಂದು ಅಭಿಪ್ರಾಯಪಟ್ಟರು.'ಹುತಾತ್ಮರಾಗುವುದು ಎಂದರೆ ಕೇವಲ ಸಾವಲ್ಲ; ಅದು ಬದ್ಧತೆ ಮತ್ತು ದೇಶ ಸೇವೆಗಾಗಿ ಪ್ರಾಣಾರ್ಪಣೆ ಮಾಡಿದವರ ತ್ಯಾಗದ ಕತೆ. ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿರುವ ಎಲ್ಲರೂ ಯೋಧರ ಧೈರ್ಯ, ನಿಷ್ಠೆ ಮತ್ತು ಹೋರಾಟವನ್ನು ಸದಾ ಸ್ಮರಿಸಬೇಕು. ಪ್ರತಿಯೊಬ್ಬ ನಾಗರಿಕನೂ ಯೋಧರ ಬಲಿದಾನ ಮರೆಯಬಾರದು' ಎಂದರು.ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಚನ್ನಾರೆಡ್ಡಿ ಮಾತನಾಡಿ, 'ನಮ್ಮೆಲ್ಲರಿಗಾಗಿ ತಮ್ಮ ಪ್ರಾಣ ತ್ಯಾಗ ಮಾಡಿದವರನ್ನು ನಾವು ಸದಾ ಸ್ಮರಿಸುತ್ತೇವೆ. ಹುತಾತ್ಮರಾದ ನಮ್ಮ ಸಹೋದ್ಯೋಗಿಗಳ ತ್ಯಾಗ ವ್ಯರ್ಥವಾಗಲು ಬಿಡುವುದಿಲ್ಲ' ಎಂದು ಹೇಳಿದರು. ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳ ಮಾಜಿ ಯೋಧರ ಕ್ಷೇಮಾಭಿವೃದ್ಧಿ ಸಂಘದ ಗೌರವ ಅಧ್ಯಕ್ಷ ಎಸ್. ಮಲ್ಲಯ್ಯ, ಬಸವರಾಜ ನಾಯಕ, ಸಲೀಂ ಹುಸೇನ್, ರಶೀದ್ ಬೇಗ್, ಶರಣಬಸವ, ಅಲಿ ಮಲಬಾರ್, ಹನುಮಂತ ನಸಲಾಪುರ್, ಜಂಗ್ಲಪ್ಪ, ಓಬಳೇಶ್, ಸೈಯದ್ ಅಹ್ಮದ್, ತಿಪ್ಪಣ್ಣ, ರಂಗನಗೌಡ, ನರಸಿಂಹಲು, ಆರ್.

## ಶಿವರಾತ್ರಿ ಅಂಗವಾಗಿ ಮಂತ್ರಾಲಯಕ್ಕೆ ಜನಸಾಗರ

ನೈಜ್ಯ ದೆಸೆ ನ್ಯೂಸ್



ರಾಯಚೂರು: ನಾಡಿನೆಲ್ಲೆಡೆ ಮಹಾ ಶಿವರಾತ್ರಿ ಅಂಗವಾಗಿ ದೇವಾಲಯಗಳಲ್ಲಿ ವಿಶೇಷ ಪೂಜೆಗಳು ನಡೆಯುತ್ತಿವೆ. ರಾಯಚೂರು ಜಿಲ್ಲೆಯ ಮಂತ್ರಾಲಯದಲ್ಲಿ ಭಕ್ತಿಭಾವದಿಂದ ಮಹಾ ಶಿವರಾತ್ರಿ ಆಚರಣೆ ನಡೆಯಿತು. ಮಂತ್ರಾಲಯ ಮಠದ ಪೀಠಾಧಿಪತಿ ಶ್ರೀ ಸುಭುದೇಂದ್ರ ತೀರ್ಥ ಶ್ರೀಗಳ ನೇತೃತ್ವದಲ್ಲಿ ಶಿವನಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.ಶಿವಲಿಂಗಕ್ಕೆ ಅಭಿಷೇಕ, ಅಲಂಕಾರ ಹಾಗೂ ವಿಶೇಷ ಆರತಿ ನೆರವೇರಿಸಲಾಯಿತು.ಶಿವರಾತ್ರಿ ಹಿನ್ನಲೆಯಲ್ಲಿ ಮಂತ್ರಾಲಯದತ್ತ ಭಕ್ತರ ದಂಡು ಹರಿದುಬಂದಿದ್ದು, ದೇವರ ದರ್ಶನಕ್ಕಾಗಿ ಭಕ್ತರು ಸಾಲಿನಲ್ಲಿ ನಿಂತು ಪೂಜೆ ಸಲ್ಲಿಸಿದರು. ಶ್ರೀಗಳು ಸ್ವತಃ ಶಿವಲಿಂಗ ಪೂಜೆ ನೆರವೇರಿಸಿ ಮಹಾ ಶಿವರಾತ್ರಿಯನ್ನು ಆಚರಿಸಿದರು. ದೇವಾಲಯದ ಆವರಣದಲ್ಲಿ ಭಕ್ತಿ ವಾತಾವರಣ ನಿರ್ಮಾಣವಾಗಿದ್ದು, ಭಕ್ತರು ಜಪ, ಭಜನೆಗಳಲ್ಲಿ ತೊಡಗಿಕೊಂಡಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ಪಾರ್ವತಿ-ಪರಮೇಶ್ವರ ಕಲ್ಯಾಣೋತ್ಸವ



ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯಾದ್ಯಂತ ಮಹಾಶಿವರಾತ್ರಿಯ ಸಡಗರ ಮನೆಮಾಡಿದ್ದು, ಐತಿಹಾಸಿಕ ಹಿನ್ನೆಲೆಯುಳ್ಳ ರಾಯಚೂರಿನ ಚಂದ್ರಮೌಳೇಶ್ವರ ದೇವಾಲಯದ ಆವರಣದಲ್ಲಿ ಪಾರ್ವತಿ ಪರಮೇಶ್ವರ ಕಲ್ಯಾಣೋತ್ಸವವು ಅತ್ಯಂತ ಭಕ್ತಿಭಾವ ಹಾಗೂ ಸಂಭ್ರಮ ಸಡಗರದಿಂದ ನೆರವೇರಿತು. ಸಾವಿರಾರು ಭಕ್ತರ ಸಮ್ಮುಖದಲ್ಲಿ ನಡೆದ ಈ ದಿವ್ಯ ಕಲ್ಯಾಣೋತ್ಸವವನ್ನ ಸಾವರಾರು ಭಕ್ತರು ಕಣ್ತುಂಬಿಕೊಂಡರು. ಮೆರವಣಿಗೆಯ ಮೂಲಕ ಆಗಮಿಸಿದ ದೇವಿ ಐತಿಹಾಸಿಕ ಉದ್ಭವ ಶಿವಲಿಂಗಕ್ಕೆ ಪ್ರಸಿದ್ಧಿಯಾದ ಈ ದೇವಸ್ಥಾನದಲ್ಲಿ ಪ್ರತಿ ವರ್ಷ ಶಿವರಾತ್ರಿಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ.** ಈ ಬಾರಿಯ ವಿಶೇಷ ಆಕರ್ಷಣೆಯೆಂದರೆ ಪಾರ್ವತಿ-ಪರಮೇಶ್ವರರ ಕಲ್ಯಾಣೋತ್ಸವ. ವಿವಿಧ ಮಂಗಳ ವಾದ್ಯಗಳ ಘೋಷದೊಂದಿಗೆ, ನಗರದ ಬಸವನಭಾವಿ ಆಂಜನೇಯ ದೇವಸ್ಥಾನದಿಂದ ಪಾರ್ವತಿ ದೇವಿಯ ಮೂರ್ತಿಯನ್ನು ಭವ್ಯ ಮೆರವಣಿಗೆಯ ಮೂಲಕ ಕರೆತರಲಾಯಿತು. ಮೆರವಣಿಗೆಯುದ್ದಕ್ಕೂ ಭಕ್ತರು ಶಿವನನ್ನ ನೆನೆಯುತ್ತಾ ಸಾಂಪ್ರದಾಯಿಕ ಸಂಭ್ರಮದಲ್ಲಿ ಪಾಲ್ಗೊಂಡಿದ್ದರು.101 ದಂಪತಿಗಳಿಂದ ಸಮೂಹ ಶಿವಪೂಜೆಈ ಬಾರಿಯ ಕಲ್ಯಾಣೋತ್ಸವದ ಮತ್ತೊಂದು ವಿಶೇಷವೆಂದರೆ ಸಮೂಹ ಪೂಜೆ. ಒಟ್ಟು 101 ದಂಪತಿಗಳಿಗೆ ಏಕಕಾಲದಲ್ಲಿ ಶಿವ ಪೂಜೆಯನ್ನು ನೆರವೇರಿಸಲು ದೇವಾಲಯದ ಆಡಳಿತ ಮಂಡಳಿ ಅವಕಾಶ ಕಲ್ಪಿಸಿಕೊಟ್ಟಿತ್ತು. ವೇದಮಂತ್ರಗಳ ಪಠಣದ ನಡುವೆ ದಂಪತಿಗಳು ಭಕ್ತಿಯಿಂದ ಶಿವ-ಪಾರ್ವತಿಯರನ್ನು ಆರಾಧಿಸಿದರು. ಈ ದೃಶ್ಯವು ದೇವಾಲಯದ ಆವರಣದಲ್ಲಿ ಆಧ್ಯಾತ್ಮಿಕ ಕಳೆಯನ್ನು ಹೆಚ್ಚಿಸಿತ್ತು.ಮಹಾಶಿವರಾತ್ರಿಯ ಪರ್ವಕಾಲದಲ್ಲಿ ಭಕ್ತರಿಗೆ ಶಿವಲಿಂಗದ ಸ್ಪರ್ಶ ದರ್ಶನಕ್ಕೆ ಅವಕಾಶ ನೀಡಲಾಗಿ-ತ್ತು. ಮಧ್ಯರಾತ್ರಿಯಿಂದಲೇ ಸಾವಿರಾರು ಭಕ್ತರು ಸರತಿ ಸಾಲಿನಲ್ಲಿ ನಿಂತು ಉದ್ಭವ ಶಿವಲಿಂಗಕ್ಕೆ ನಮಸ್ಕ-ರಿಸಿದರು. ಹಗಲಿಡೀ ನಡೆದ ಭಜನೆ, ಪೂಜೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಸಾವಿರಾರು ಭಕ್ತರು ಶಿವನನ್ನ ಆರಾಧಿಸುತ್ತಾ ಭಕ್ತಿಯಲ್ಲಿ ಮಿಂದೆದ್ದರು. ಕಲ್ಯಾಣೋತ್ಸವದ ನಂತರ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಒಟ್ಟಾರೆಯಾಗಿ ರಾಯಚೂರಿನ ಚಂದ್ರಮೌಳೇಶ್ವರ ದೇವಾಲಯವು ಶಿವಭಕ್ತರ ಹರ್ಷೋದ್ಗಾರದಿಂದ ಕೈಲಾಸದಂತೆ ಕಂಗೊಳಿಸುತ್ತಿತ್ತು.ಮೈಸೂರು ಅರಮನೆ ಆವರಣದಲ್ಲಿ 11 ಕೆಜಿ ಚಿನ್ನದ ಮುಖವಾಡ ಧರಿಸಿ ದರ್ಶನ ನೀಡಿದ ತ್ರಿನೇಶ್ವರ ಸ್ವಾಮಿ ಮೈಸೂರು:ಸಾಂಸ್ಕೃತಿ-ಕ ನಗರಿ ಮೈಸೂರಿನಲ್ಲಿ ಮಹಾಶಿವರಾತ್ರಿಯ ಸಡಗರ ಕಳೆಗಟ್ಟಿದೆ. ಅರಮನೆ ಆವರಣದ ಆಗ್ನೇಯ ದಿಕ್ಕಿನಲ್ಲಿರುವ ಐತಿಹಾಸಿಕ ಪ್ರಸಿದ್ಧ ಶ್ರೀ ತ್ರಿನೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶಿವನಿಗೆ ವಿಶೇಷ ಪೂಜಾ ಕೈಂಕರ್ಯಗಳು ನೆರವೇರುತ್ತಿದ್ದು, ಭಕ್ತ ಸಾಗರವೇ ಹ-ರಿದು ಬರುತ್ತಿದೆ.11 ಕೆಜಿ ಚಿನ್ನದ ಮುಖವಾಡದ ವೈಭವ ಈ ವರ್ಷದ ಶಿವರಾತ್ರಿಯ ಪ್ರಮುಖ ಆಕರ್ಷಣೆ ಎಂದರೆ ತ್ರಿನೇಶ್ವರ ಸ್ವಾಮಿಗೆ ಧಾರಣೆ ಮಾಡಲಾದ 11 ಕೆಜಿ ತೂಕದ ಚಿನ್ನದ ಮುಖವಾಡ. ಬೆಳಗಿನ ಜಾವವೇ ದೇವಾಲಯದ ಅರ್ಚಕರು ಮೂಲಮೂರ್ತಿಗೆ ವಿಶೇಷ ಅಭಿಷೇಕ, ಪಂಚಾಮೃತ ಅಭಿಷೇಕ ಹಾಗೂ ರುದ್ರಾಭಿಷೇಕಗಳನ್ನು ನೆರವೇರಿಸಿದರು. ಪೂಜಾ ವಿಧಿವಿಧಾನಗಳ ನಂತರ, ಜಿಲ್ಲಾ ಖಜಾನೆಯಿಂದ ಬಿಗಿ ಭದ್ರತೆಯಲ್ಲಿ ತರಲಾಗಿದ್ದ ಚಿನ್ನದ ಮುಖವಾಡವನ್ನು ಸ್ವಾಮಿಗೆ ತೊಡಗಿಸಲಾಯಿತು. ಈ ಅಪರೂಪದ ಸುಂದರ ರೂಪವನ್ನು ಕಣ್ತುಂಬಿಕೊಳ್ಳಲು ಭಕ್ತರು ಮುಂಜಾನೆಯಿಂದಲೇ ಕಿಲೋಮೀಟರ್‌ಗಟ್ಟಲೆ ಸಾಲಿನಲ್ಲಿ ನಿಂತಿದ್ದರು.ಪೂಜಾ ಕೈಂಕರ್ಯಗಳು ಮತ್ತು ಅಲಂಕಾರ ದೇವಸ್ಥಾನದ ಸ್ಥಾನಿಕರಾದ ವೆಂಕಟೇಶ್ ಅವರ ನೇತೃತ್ವದಲ್ಲಿ ಶಿವರಾತ್ರಿಯ ಅಂಗವಾಗಿ ನಾಲ್ಕು ಯಾಮಗಳ ಪೂಜೆ ನಿರಂತರವಾಗಿ ನಡೆಯುತ್ತಿದೆ. ಇಡೀ ದೇವಾಲಯದ ಸಂಕೀರ್ಣವನ್ನು ವಿವಿಧ ಬಗೆಯ ಸುಗಂಧಭರಿತ ಹೂವುಗಳು ಮತ್ತು ವಿದ್ಯುತ್ ದೀಪಗಳಿಂದ ಶೃಂಗರಿಸಲಾಗಿದ್ದು, ಅರಮನೆಯ ಆವರಣಕ್ಕೆ ಕೈಲಾಸದ ಕಳೆ ಬಂದಿದೆ. ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಕುಡಿಯುವ ನೀರು ಮತ್ತು ಸಾಲಿನಲ್ಲಿ ನಿಲ್ಲಲು ನೆರಳಿನ ವ್ಯವಸ್ಥೆ ಮಾಡಲಾಗಿದೆ.ಬಿಗಿ ಪೊಲೀಸ್ ಬಂದೋಬಸ್ತ್ ಸಾವಿರಾರು ಭಕ್ತರು ಏಕಕಾಲದಲ್ಲಿ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ, ಮೈಸೂರು ನಗರ ಪೊಲೀಸರು ವ್ಯಾಪಕ ಭದ್ರತೆ ಒದಗಿಸಿದ್ದಾರೆ. ಎಸಿಪಿ ನೇತೃತ್ವದಲ್ಲಿ ಇನ್‌ಸ್ಪೆಕ್ಟರ್‌ಗಳು ಹಾಗೂ ನೂರಾರು ಪೊಲೀಸರನ್ನು ನಿಯೋಜಿಸಲಾಗಿದೆ. ಸಿಸಿಟಿವಿ ಕ್ಯಾಮೆರಾಗಳ ಮೂಲಕ ನಿರಂತರ ನಿಗಾ ವಹಿಸಲಾಗುತ್ತಿದ್ದು, ಚಿನ್ನದ ಮುಖವಾಡ ಇರುವುದರಿಂದ ಭದ್ರತೆಯನ್ನು ಇನ್ನಷ್ಟು ಹೆಚ್ಚಿಸಲಾಗಿದೆ. ರುದ್ರಾಕ್ಷಿ ಮಂಟಪೋತ್ಸವದೊಂದಿಗೆ ಸಮಾರೋಪ ಶಿವರಾತ್ರಿಯ ಜಾಗರಣೆಯ ನಂತರ, ಸೋಮವಾರ ಬೆಳಿಗ್ಗೆ ವಿಶೇಷವಾದ ರುದ್ರಾಕ್ಷಿ ಮಂಟಪೋತ್ಸವ ಜರುಗಲಿದೆ. ಈ ಮಂಟಪೋತ್ಸವದ ಬಳಿಕ ಮಹಾಶಿವರಾತ್ರಿಯ ಅಧಿಕೃತ ಪೂಜಾ ಕಾರ್ಯಕ್ರಮಗಳು ಮುಕ್ತಾಯಗೊಳ್ಳಲಿವೆ. ಈ ಐತಿಹಾಸಿಕ ದೇವಾಲಯವು ರಾಜರ ಕಾಲದಿಂದಲೂ ಶಿವರಾತ್ರಿಯಂದು ವಿಶೇಷ ಮಹತ್ವ ಪಡೆದಿದ್ದು, ಮೈಸೂರು ಪ್ರಾಂತ್ಯದ ಜನ-ರಿಗೆ ಇದು ಶ್ರದ್ಧಾ ಕೇಂದ್ರವಾಗಿದೆ. ಅರಮನೆ ಆವರಣದಲ್ಲಿ ಇಂದು ಲೈಟಿಂಗ್ಸ್ ಸಹ ಇರಲಿದ್ದು ಸಂಜೆ ವೇಳೆಗೆ ಭಕ್ತರ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ.

## ಹಾವು, ನಾಯಿ ಕಡಿತ ಕಡಿಮೆ ಮಾಡಲು ಕ್ರಮವಹಿಸಿ: ಡಿಸಿ



ನೈಜ್ಯ ದೆಸೆ ನ್ಯೂಸ್

ಜಿಲ್ಲೆಯಲ್ಲಿ ಹಾವು ಮತ್ತು ನಾಯಿ ಕಡಿತ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಅದನ್ನು ತಡೆಗಟ್ಟಲು ಹಾಗೂ ನಿಯಂತ್ರಿಸಲು ಕ್ರಮಕೈಗೊಳ್ಳುವಂತೆ ಜಿಲ್ಲಾಧಿಕಾರಿ ಸಂಗಪ್ಪ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಜರುಗಿದ ಜಿಲ್ಲಾ ಕಣ್ಗಾವಲು ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 'ಹಾವು ಕಡಿತದಂತಹ ತುರ್ತು ಪರಿಸ್ಥಿತಿಗಳಲ್ಲಿ ಪ್ರಾಥಮಿಕ ಚಿಕಿತ್ಸೆ ಸಮಯಕ್ಕೆ ಸರಿಯಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಸೂಕ್ತ ಚಿಕಿತ್ಸೆ ಒದಗಿಸಲು ಅಗತ್ಯ ಕ್ರಮಕೈಗೊಳ್ಳಬೇಕುಹಾವು ಕಡಿದಾಗ ತಕ್ಷಣ ಚಿಕಿತ್ಸೆ ಪಡೆಯದಿದ್ದರೆ ಜೀವಾಪಾಯ ಸಂಭವಿಸಬಹುದಾದ ಸಾಧ್ಯತೆ ಹೆಚ್ಚಾಗಿರುತ್ತದೆ. ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು' ಎಂದರು.'ಜಿಲ್ಲೆಯಲ್ಲಿ 2024ರಲ್ಲಿ 371 ಹಾವು ಕಡಿತದ ಪ್ರಕರಣಗಳಲ್ಲಿ ಆರು ಜನರು ಮೃತಪಟ್ಟಿದ್ದರೆ, 2025ರಲ್ಲಿ 586 ಪ್ರಕರಣಗಳಲ್ಲಿ ನಾಲ್ವರು, 2026ರ ಜನವರಿ ತಿಂಗಳಲ್ಲಿ 37 ಪ್ರಕರಣಗಳು ಕಂಡು ಬಂದಿದ್ದು, ಒಬ್ಬರು ಮೃತಪಟ್ಟಿದ್ದಾರೆ. ಪ್ರತಿ ತಾಲ್ಲೂಕು, ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಅಗತ್ಯ ಪ್ರಮಾಣದ ಆಂಟಿ- ವನೆಲ್ ಇಂಜೆಕ್ಷನ್‌ಗಳು ಲಭ್ಯವಿರುವಂತೆ ನೋಡಿಕೊಳ್ಳಬೇಕು' ಎಂದು ಸೂಚಿಸಿದರು.'ವಿಷಕಾರಿ ಹಾವು ಕಚ್ಚಿದಾಗ ರಕ್ತ ಪರಿಚಲನೆ ತಡೆಗಟ್ಟುವಂತಹ ಕೈಗಡಿಯಾರ, ಬಳೆ ಉಂಗುರ ಮುಂತಾದವುಗಳನ್ನು ತೆಗೆಯಬೇಕು. ಕಚ್ಚಿದ ಭಾಗವನ್ನು ಅಲುಗಾಡದಂತೆ ನೋಡಿಕೊಳ್ಳಬೇಕೆ ಹೊರತು, ಕಚ್ಚಿದ ಭಾಗದಲ್ಲಿ ಬಟ್ಟೆ ಕಟ್ಟಬಾರದು. ಪ್ರಾಥಮಿಕ ಹಂತದ ವಿಧಾನಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ' ಎಂದು ತಿಳಿಸಿದರು.'ಇತ್ತೀಚೆಗೆ ನಾಯಿ ಕಡಿತ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದ್ದು, ಬೀದಿ ನಾಯಿಗಳ ಬಗ್ಗೆ ಸಾರ್ವಜನಿಕರು ಹಾಗೂ ಮಕ್ಕಳು ಜಾಗೃತಿಯಿಂದ ಇರಲು ಸೂಕ್ತ ತಿಳಿವಳಿಕೆ ನೀಡುವ ಅಗತ್ಯವಿದೆ. ನಾಯಿ ಕಡಿತ ಪ್ರಕರಣಗಳಲ್ಲಿ ಈಗಾಗಲೇ ಇಬ್ಬರು ಮೃತಪಟ್ಟಿದ್ದಾರೆ. ಪಶುಪಾಲನಾ ಇಲಾಖೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಸಹಕಾರದಿಂದ ಬೀದಿ ನಾಯಿಗಳ ನಿಯಂತ್ರಣಕ್ಕೆ ಕ್ರಮಕೈಗೊಳ್ಳಬೇಕು. ಶಾಲೆಗಳಲ್ಲಿ ಅರಿವು ಮೂಡಿಸಬೇಕು' ಎಂದರು.ಹೆಚ್ಚುವರಿ ಜಿಲ್ಲಾಧಿಕಾರಿ ಅಶೋಕ ತೇಲಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಮಂಜುನಾಥ ಡಿ.ಎನ್. ಜಿಲ್ಲಾ ಶಸ್ತ್ರಚಿಕಿತ್ಸಕ ಮಹೇಶ ಕೋಣಿ, ಡಾ.ಶಿವನಗೌಡ ಪಾಟೀಲ, ಡಾ.ಸುವರ್ಣ ಕುಲಕರ್ಣಿ, ಡಾ.ಕುಸುಮಾ ಮಾಗಿ ಇದ್ದರು.'ರೋಗಿಗಳ ಜೊತೆ ಸೌಜನ್ಯದಿಂದ ವರ್ತಿಸಿ"ಆಸ್ಪತ್ರೆಗಳಲ್ಲಿ ಔಷಧಿಗಳ ಲಭ್ಯತೆ ಸಿಬ್ಬಂದಿ ಕೊರತೆ ಹಾಗೂ ಸೂಕ್ತ ಚಿಕಿತ್ಸೆ ದೊರೆಯುತ್ತಿರುವ ಬಗ್ಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಚಿಕಿತ್ಸೆಗೆ ಬಂದಂತಹ ರೋಗಿಗಳ ಜೊತೆ ಸೌಜನ್ಯದಿಂದ ವರ್ತಿಸಬೇಕು. ಯಾವುದೇ ಲೋಪವಾಗದಂತೆ ನೋಡಿಕೊಳ್ಳಬೇಕು' ಎಂದು ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದರು.

## ನೇಮಕಾತಿ ಪ್ರಕಟಣೆ

WCD ಬೆಂಗಳೂರು ನೇಮಕಾತಿ 2026: ವಿವಿಧ ಅಧ್ಯಕ್ಷರು ಮತ್ತು ಸದಸ್ಯರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೆಂಗಳೂರು ಫೆಬ್ರವರಿ 2026 ರ WCD ಬೆಂಗಳೂರು ಅಧಿಕೃತ ಅಧಿಸೂಚನೆಯ ಮೂಲಕ ಅಧ್ಯಕ್ಷರು ಮತ್ತು ಸದಸ್ಯರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರು – ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 09–ಮಾರ್ಚ್–2026 ರಂದು ಅಥ–ವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: dwcd.karnataka.gov.in ಅರ್ಜಿಯ ಕೊನೆಯ ದಿನಾಂಕ : 09–ಮಾರ್ಚ್–2026

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ಪಡಿತರ ಅಕ್ರಮ ಸಾಗಾಟ: 10 ಟನ್‌ಗೂ ಅಧಿಕ ಅಕ್ಕಿ ಜಪ್ತಿ, ಲಾರಿ ವಶ


ನೈಜ್ಯ ದೆಸೆ ನ್ಯೂಸ್




ಕವಿತಾಳ: ಸಾರ್ವಜನಿಕ ವಿತರಣಾ ವ್ಯವಸ್ಥೆಯ (ಪಿಡಿಎಸ್) ಅಡಿಯಲ್ಲಿ ನೀಡಲಾಗುವ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಂಗ್ರಹಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಸಾಗಿಸುತ್ತಿದ್ದ ಪ್ರಕರಣವನ್ನು ಕವಿತಾಳ ಪೊಲೀಸರು ಭೇದಿಸಿದ್ದಾರೆ.ಬೆಳಗಿನ ಜಾವ ಸುಮಾರು 4 ಗಂಟೆಗೆ 112 ತುರ್ತು ಸೇವಾ ವಾಹನದ ಸಿಬ್ಬಂದಿ ಹಾಲಾಪೂರ ಗ್ರಾಮದ ಮನೆಯೊಂದರ ಮುಂದೆ ಅನುಮಾನಾಸ್ಪದವಾಗಿ ನಿಲ್ಲಿಸಿದ್ದ ಟಿಎನ್ 52 ಎಬಿ 3335 ಸಂಖ್ಯೆಯ ಲಾರಿಯ ಮೇಲೆ ದಾಳಿ ನಡೆಸಿದರು. ತಪಾಸಣೆ ವೇಳೆ ಲಾರಿಯಲ್ಲಿ 40 ಕೆಜಿ ತೂಕದ 260 ಚೀಲಗಳು ಸೇರಿ ಒಟ್ಟು 10 ಟನ್ 4 ಕ್ವಿಂಟಾಲ್ ಪಡಿತರ ಅಕ್ಕಿ ಪತ್ತೆಯಾಯಿತು.ಪ್ರಾಥ–ಮಿಕ ತನಿಖೆಯಲ್ಲಿ ಆರೋಪಿಗಳು ಪಡಿತರದಾರರಿಂದ ಕಡಿಮೆ ದರಕ್ಕೆ ಅಕ್ಕಿಯನ್ನು ಖರೀದಿಸಿ ಮಾರುಕಟ್ಟೆಯಲ್ಲಿ ಹೆಚ್ಚಿನ ದರಕ್ಕೆ ಮಾರಾಟ ಮಾಡಲು ಯತ್ನಿಸುತ್ತಿದ್ದರೆಂಬ ಮಾಹಿತಿ ಹೊರಬಂದಿದೆ. ದಾಳಿ ವೇಳೆ ಮುಖ್ಯ ಆರೋಪಿ ಸ್ಥಳದಿಂದ ಪರಾರಿಯಾಗಿದ್ದು, ಪೊಲೀಸರು ಅವನ ಬಂಧನಕ್ಕಾಗಿ ಶೋಧ ಕಾರ್ಯಾಚರಣೆ ನಡೆಸುತ್ತಿದ್ದಾರೆ.ಜಪ್ತಿಯಾದ ಅಕ್ಕಿಯ ಮೌಲ್ಯ ಲಕ್ಷಾಂತರ ರೂಪಾಯಿಗಳಷ್ಟಿರಬಹುದೆಂದು ಅಂದಾಜಿಸಲಾಗಿದೆ. ಆಹಾರ ನಿರೀಕ್ಷಕ ದೇವರಾಜ ಕುರಡಗಿ ನೀಡಿದ ದೂರಿನ ಆದ–ಾರದಲ್ಲಿ ಕವಿತಾಳ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ. 15/2026 ದಾಖಲಿಸಿ ಅಗತ್ಯ ವಸ್ತುಗಳ ಕಾಯ್ದೆ, 1955ರ ಕಲಂ 3 ಮತ್ತು 7ರಡಿ ಪ್ರಕರಣ ದಾಖಲಿಸಲಾಗಿದೆ.ಸ್ಥಳಕ್ಕೆ ಆಹಾರ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಅಕ್ರಮ ಪಡಿತರ ಸಾಗಾಟದ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಅಕ್ರಮ ತಡೆಗಟ್ಟಲು ಇಲಾಖೆಯಿಂದ ನಿರಂತರ ನಿಗಾವಹಿಸಲಾಗುತ್ತಿದೆ.

## ಹಾಲಾಪುರ: ಮಹಾಶಿವರಾತ್ರಿ ಪ್ರಯುಕ್ತ ಶ್ರೀ ದುಗ್ಗಮ್ಮ ದೇವಿ ಭಾವಚಿತ್ರ ಮೆರವಣಿಗೆ ವೈಭವ

ನೈಜ್ಯ ದೆಸೆ ನ್ಯೂಸ್



ಹಾಲಾಪೂರ: ಮಹಾಶಿವರಾತ್ರಿ ಹಬ್ಬದ ಅಂಗವಾಗಿ ಗ್ರಾಮದ ಕ–ರಿಯಪ್ಪ ಹಿರೇಕುರುಬರ ಅವರು ಕಳೆದ 35 ವರ್ಷಗಳಿಂದ ನಿರಂತರವಾಗಿ ಶಿವರಾತ್ರಿ ದಿನದಂದು ತಮ್ಮ ಮನೆಯಿಂದ ಶ್ರೀ ದುಗ್ಗಮ್ಮ ದೇವಿಯ ಭಾವಚಿತ್ರದ ಭಕ್ತಿಭರಿತ ಮೆರವಣಿಗೆಯನ್ನು ಆಯೋಜಿಸುತ್ತಾ ಬಂದಿದ್ದಾರೆ.ಈ ಮೆರವಣಿಗೆ ಗ್ರಾಮದಲ್ಲಿನ ಪ್ರಮುಖ ಬೀದಿಗಳ ಮೂಲಕ ಗಚ್ಚಿನ ಹೊಲದಲ್ಲಿರುವ ಶ್ರೀ ದುಗ್ಗಮ್ಮ ದೇವಿ ದೇವಸ್ಥಾನದವರೆಗೆ ಸಾಗುತ್ತದೆ. ಕುಂಭ, ಕಳಸ, ಡೊಳ್ಳುಗಳ ನಾದದೊಂದಿಗೆ ಹಾಗೂ ಅನೇಕ ಸುಮಂಗಲಿಯರ ಭಾಗವಹಿಸುವಿಕೆಯಿಂದ ಮೆರವಣಿಗೆಗೆ ವಿಶೇಷ ಶೋಭೆ ಕಂಡುಬರುತ್ತದೆ. ದೇವಸ್ಥಾನಕ್ಕೆ ತಲುಪಿದ ನಂತರ ಭಕ್ತಿಪೂರ್ವಕವಾಗಿ ಪೂಜಾ ಪುನಸ್ಕಾರಗಳು ನೆರವೇರಿಸಲಾಗುತ್ತದೆ.ಪೂಜೆ ಬಳಿಕ ಭಾಗವಹಿಸಿದ ನೂರಾರು ಭಕ್ತರಿಗೆ ಪ್ರಸಾದ ವಿತರಣೆ ಮಾಡಲಾಗುತ್ತದೆ. ಇದೇ ವೇಳೆ ಪ್ರತಿ ವರ್ಷ ದಸರಾ ಹಬ್ಬದ ಸಂದರ್ಭದಲ್ಲಿ ದೇವಸ್ಥಾನದಲ್ಲಿ ಪ್ರವಚನ ಕಾರ್ಯಕ್ರಮವೂ ನಡೆಯುತ್ತದೆ. ಗ್ರಾಮ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರ ಸಹಕಾರದಿಂದ ಅರಣ್ಯ ಪ್ರದೇಶದಲ್ಲಿರುವ ಈ ದೇವಸ್ಥಾನಕ್ಕೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ ಎಂದು ಕ–ರಿಯಪ್ಪ ಹಿರೇಕುರುಬರ ತಿಳಿಸಿದರು.ಈ ಸಂದರ್ಭದಲ್ಲಿ ಗ್ರಾಮಸ್ಥರಾದ ಸಿದ್ದಯ್ಯ ಸ್ವಾಮಿ ಕಿರಾಣಿ, ಈಶಣ್ಣ ಸಾವುಕಾರ,

# ಐಗೆ ಡಬಲ್ ಡಿಗ್ರಿ ಕೋರ್ಸ್ ಮಂಜೂರು

ನೈಜ್ಯ ದೆಸೆ ನ್ಯೂಸ್



ನಗರದ ನೂತನ ವಿದ್ಯಾಲಯ ಸಂಸ್ಥೆ ಪದವಿ ಕಾಲೇಜಿಗೆ ಉದ್ಯೋಗ ಆಧಾರಿತ ನಾಲ್ಕು ವರ್ಷದ ಸಮಗ್ರ ಶಿಕ್ಷಕ ಶಿಕ್ಷಣ ಕಾರ್ಯಕ್ರಮ (ಐಟಿಇಪಿ) ಡಬಲ್ ಡಿಗ್ರಿ ಕೋರ್ಸ್ ಮಂಜೂರಾಗಿದೆ ಎಂದು ಸಂಸ್ಥೆ ಅಧ್ಯಕ್ಷ ಡಾ.ಗೌತಮ ಜಹಾಗೀರದಾರ್, ಕಾರ್ಯದರ್ಶಿ ಅಭಿಜಿತ್ ದೇಶಮುಖ ಹೇಳಿದರು.ಕಲ್ಯಾಣ ಕರ್ನಾಟಕದಲ್ಲಿ ಈ ಕೋರ್ಸ್ ಪಡೆದಿರುವ ಏಕೈಕ ಕಾಲೇಜು ನಮ್ಮದು.ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರಾರಂಭವಾಗಲಿದ್ದು, ಪಿಯುಸಿ ಬಳಿಕ ಈ ಕೋರ್ಸ್ಗೆ ಸೇರಬಹುದು ಎಂದು ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.ಐಟಿಇಪಿ ಕೋರ್ಸ್ ಪೂರ್ಣಗೊಂಡ ನಂತರ ಬಿಎಸ್ಸಿ ಬಿ.ಇಡಿ, ಬಿಎ ಬಿ.ಇಡಿ ಪದವಿ ಪ್ರಮಾಣಪತ್ರ ದೊರೆಯಲಿದೆ. ಇದರ ಹೊರತಾಗಿ ಪ್ರತ್ಯೇಕ ಬಿ.ಇಡಿ ಮಾಡುವ ಅಗತ್ಯವಿಲ್ಲ. ಪದವಿ ನಂತರ ಬಿ.ಇಡಿ ಮಾಡಿದರೆ ಐದು ವರ್ಷದ ಅವಧಿ. ಆದ–ರೆ ನಾಲ್ಕು ವರ್ಷದ ನೂತನ ಕೋರ್ಸ್ನಲ್ಲಿ ಬಿ.ಇಡಿ ಜತೆಯಾಗಿ ಪ್ರಮಾಣಪತ್ರ ಸಿಗಲಿದ್ದು, ಶಿಕ್ಷಕರ ಹುದ್ದೆಗೆ ನೇರವಾಗಿ ಅರ್ಹತೆ ಪಡೆಯಲಿದ್ದಾರೆ ಎಂದು ವಿವರಿಸಿದರು.ಕೇಂದ್ರ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅಡಿ ಶಾಸನಬದ್ಧ ಸಂಸ್ಥೆಯಾಗಿರುವ ಎನ್ಸಿಟಿಇ ಈ ಕೋರ್ಸ್ ಮಂಜೂರು ಮಾಡಿದ್ದು, ಗುಲ್ಬರ್ಗ ವಿಶ್ವವಿದ್ಯಾಲಯದ ಸಂಲಗ್ನತೆ ಪಡೆಯಲಾಗುತ್ತಿದೆ. ಎನ್ಇಪಿ 2020 ಹೊಂದಾಣಿಕೆಯೊಂದಿಗೆ ಕೋರ್ಸ್ ವಿದ್ಯಾರ್ಥಿ ಶಿಕ್ಷಕರಿಗೆ ಸಂಯೋಜಿತ ಶಿಕ್ಷಕರ ಶಿಕ್ಷಣ ಕಾರ್ಯಕ್ರಮ (ಐಟಿಇಪಿ) ಒಳಗೊಂಡಿದೆ. ಶಿಕ್ಷಕರ ಶಿಕ್ಷಣಕ್ಕಾಗಿ ಏಕರೂಪದ ಮಾನದಂಡ ಕಾಯ್ದುಕೊಳ್ಳಲು, ಪೂರ್ವಸೇವಾ ಶಿಕ್ಷಕರ ಸಿದ್ಧತೆ ಕಾರ್ಯಕ್ರಮಗಳಿಗೆ ರಾಷ್ಟ್ರೀಯ ಪರೀಕ್ಷೆ ಸಂಸ್ಥೆ(ಎನ್ಇಟಿ) ನಡೆಸುವ ವಿಷಯ ಮತ್ತು ಯೋಗ್ಯತಾ ಪರೀಕ್ಷೆ ಮೂಲಕ ಪ್ರವೇಶಾವಕಾಶವಿದೆ ಎಂದು ತಿಳಿಸಿದರು.ಪ್ರೊ. ಗೋವಿಂದ ಪೂಜಾರ್, ಡಾ.ಮೀನಾ ಪತಕಿ, ಡಾ.ಗಿರೀಶ ಗಲಗಲಿ, ಡಾ.ದಯಾನಂದ ಶಾಸಿ, ಅನಂತ ಗುಂಡಿ ಇದ್ದರು.ವಿನ್ಯಾಸ&ಅನುಷ್ಠಾನ ವಿಧಾನ ಬಹುಶಿಸ್ತೀಯ ಪರಿಸರದಲ್ಲಿ ಶಿಕ್ಷಣ, ಶಾಲಾ ವ್ಯವಸ್ಥೆಯ 12ನೇ ತರಗತಿ ನಂತರ ನಾಲ್ಕು ವರ್ಷ ಅವಧಿ ಕೋರ್ಸ್ಗೆ ಎನ್ಟಿಎ ನಡೆಸುವ ರಾಷ್ಟ್ರೀಯ ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ ಪ್ರವೇಶ, 2030ರ ವೇಳೆಗೆ ಶಿಕ್ಷಕರಾಗಲು ಕನಿಷ್ಠ ಪದವಿ ಅರ್ಹತೆ, ಯುಜಿಸಿ ಪ್ರಕಾರ ಕ್ರೆಡಿಟ್ ವ್ಯವಸ್ಥೆ ಪರಿಚಯ, ಸಂಯೋಜಿತ ದ್ವಿ ಪ್ರಮುಖ ಪದವಿ, ಶಿಕ್ಷಣದ ಶಿಸ್ತು ಮತ್ತು ವೃತ್ತಿಪರ ಜ್ಞಾನ, 21ನೇ ಶತಮಾನದ ಕೌಶಲ ಮೇಲೆ ಕೇಂದ್ರೀಕೃತ, ಸೆಕೆಂಡರಿ ಹಂತದ ವಿಶೇಷತೆ&9ರಿಂದ 12ನೇ ತರಗತಿ ಬೋಧನೆಗಾಗಿ, ಹೈಸ್ಕೂಲ್ ಮತ್ತು ಪಿಯು ಕಾಲೇಜು ಉಪನ್ಯಾಸಕರ ಹುದ್ದೆಗೆ ಅರ್ಹತೆ ದೊರೆಯಲಿದೆ.ನಾಲ್ಕು ವರ್ಷದ ಸಂಯೋಜಿತ ಬಿಇಡಿ ಶಿಕ್ಷಣದಲ್ಲಿ ಡ್ಯೂಯಲ್ ಮೇಜರ್ಸ್ ಸಮಗ್ರ ಪದವಿ ಮತ್ತು ವಿಶೇಷ ವಿಷಯವಾಗಿದೆ. ಭಾಷೆ, ಇತಿಹಾಸ, ಸಂಗೀತ, ಗಣಿತ, ಕಂಪ್ಯೂಟರ್, ವಿಜ್ಞಾನ, ರಸಾಯನಶಾಸ, ಅರ್ಥಶಾಸ, ಕಲೆ, ದೈಹಿಕ ಶಿಕ್ಷಣ ಇತರೆ, ಶಿಕ್ಷಕರ ಶಿಕ್ಷಣವು ಸಮಾಜಶಾಸ, ಇತಿಹಾಸ, ವಿಜ್ಞಾನ, ಮನೋವಿಜ್ಞಾನ, ಬಾಲ್ಯದ ಆರೈಕೆ ಮತ್ತು ಶಿಕ್ಷಣ, ಮೂಲ ಸಾಕ್ಷರತೆ ಮತ್ತು ಸಂಖ್ಯಾಶಾಸ, ಭಾರತದ ಜ್ಞಾನ, ಅದರ ಮೌಲ್ಯ, ನೀತಿ, ಕಲೆ, ಸಂಪ್ರದಾಯವನ್ನು ಒಳಗೊಂಡಿದೆ.ಅರ್ಜಿ ಸಲ್ಲಿಕೆಗೆ ಮಾ.10 ಕೊನೇ ದಿನಅರ್ಜಿ ಸಲ್ಲಿಸುವ ಪ್ರಕ್ರಿಯೆ ಶುರುವಾಗಿದ್ದು, ಮಾ.10 ಕೊನೆಯ ದಿನ. ಏ.17ರಂದು ಪ್ರವೇಶ ಪರೀಕ್ಷೆ ನಡೆಸಿ ವೆಬ್ಸೈಟ್ (ಎಚ್ಟಿಟಿಪಿ@//ಎನ್ಟಿಎ.ಎಸಿ.ಇನ್)ನಲ್ಲಿ ಫಲಿತಾಂಶ ಪ್ರಕಟಿಸಲಾಗುವುದು. ಕಂಪ್ಯೂಟ–ರ್ ಆಧಾರಿತ ಪರೀಕ್ಷೆಯಲ್ಲಿ ಆಬ್ಜೆಕ್ಟಿವ್ ಟೈಪ್ ವಿತ್ ಮಲ್ಟಿಪಲ್ ಚಾಯ್ಸ್ ಪ್ರಶ್ನೆಗಳಿರಲಿವೆ. 12ನೇ ತರಗತಿ ಪಠ್ಯಕ್ರಮ ಆಧರಿಸಿ ಕನ್ನಡ ಸೇರಿ 13 ಭಾಷೆಗಳಲ್ಲಿ ಪರೀಕ್ಷೆ ನಡೆಯಲಿದೆ. "2026&27ರ ಶೈಕ್ಷಣಿಕ ಸಾಲಿನಿಂದ ಎನ್ಇಪಿ 2020ರಲ್ಲಿ ಕಲ್ಪಿಸಿದಂತೆ ಸಂಯೋಜಿತ ಶಿಕ್ಷಕರ ಶಿಕ್ಷಣ ಕಾರ್ಯಕ್ರಮಕ್ಕಾಗಿ ಆಯ್ದ ಕೇಂದ್ರವಾಗಿ ನೂತನ ವಿದ್ಯಾಲಯ ಪದವಿ ಕಾಲೇಜಿಗೆ ಮಾನ್ಯತೆ ನೀಡಲಾಗಿದೆ. ಈ ಕೋರ್ಸ್ ಪಡೆದ ಕಲ್ಯಾಣ ಕರ್ನಾಟಕದ ಏಕೈಕ ಕಾಲೇಜು ನಮ್ಮದು

# ಶರಣಬಸವೇಶ್ವರ ರಥೋತ್ಸವ ಅದ್ದೂರಿ


ನೈಜ್ಯ ದೆಸೆ ನ್ಯೂಸ್



ತಾಲ್ಲೂಕಿನ ನಿಲೋಗಲ್ಲ ಗ್ರಾಮದ ಶರಣಬಸವೇಶ್ವರರ 49ನೇ ವರ್ಷದ ಜಾತ್ರೋತ್ಸವ ಕಾರ್ಯಕ್ರಮ ಶನಿವಾರ ಅದ್ದೂರಿಯಾಗಿ ನೆರವೇರಿತು. ಪ್ರಯುಕ್ತ ದೇವಸ್ಥಾನದಲ್ಲಿ ವಿವಿಧ ಪೂಜೆ, ರುದ್ರಾಭಿಷೇಕಚ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿ–ತ್ತು. ನೂತನ ರಥಕ್ಕೆ ಚಾಲನೆ ನೀಡಿದ ಕೊಪ್ಪಳದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಮಾತನಾಡಿ, 'ರಥ ನಿರ್ಮಾಣಕ್ಕೆ ಪ್ರತಿಯೊಬ್ಬರು ಸಹಕಾರ ನೀಡಿ ಉದಾರ ಮನಸ್ಸು ತೋರಿದ್ದು ಅವರ ದೊಡ್ಡತನಕ್ಕೆ ಸಾಕ್ಷಿಯಾಗಿದೆ.ಗ್ರಾಮಸ್ಥರ ಸಹಾಯ ಸಹಕಾರದಿಂದ ಗ್ರಾಮದಲ್ಲಿ ಉತ್ಸವಗಳು ಸಭೆ ಸಮಾರಂಭಗಳು ಅದ್ದೂರಿಯಾಗಿ ಆಯೋಜನೆ ಸಾಧ್ಯವಾಗುತ್ತದೆ ಹಾಗೂ ಹೆಚ್ಚು ಮಹತ್ವ ಪಡೆದುಕೊಳ್ಳುತ್ತವೆ' ಎಂದರು.'ಒಳ್ಳೆಯ ನಡೆ ನುಡಿ ಹಾಗೂ ಉತ್ತಮ ವ್ಯಕ್ತಿತ್ವದೊಂದಿಗೆ ಬದುಕುಕೊಟ್ಟಿಕೊಳ್ಳುವತ್ತ ಪ್ರಯತ್ನ ಪಟ್ಟರೆ ಖಂಡಿತ ಸಾಧ್ಯವಿದೆ. ಈ ನಡೆಯು ಮನೆಯ ಚಿಕ್ಕಮಕ್ಕಳಿಗೂ ಪಾಠವಾಗುತ್ತದೆ. ಮನೆಯಲ್ಲಿ ಉತ್ತಮ ಸಂಸ್ಕಾರ ಮತ್ತು ನಡಾವಳಿಗಳು ಸರಿಯಿದ್ದರೆ ಸಹಜವಾಗಿ ಮನೆಯವರು ಕೂಡಾ ಅದೇ ದಾ–ರಿಯತ್ತ ಸಾಗುತ್ತಾರೆ. ಆದರೂ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದು ಒಳ್ಳೆಯ ಸಂಸ್ಕಾರಗಳನ್ನು ಹೇಳಿಕೊಡುವ ಕೆಲಸ ಪ್ರತಿಯೊಬ್ಬರು ಮಾಡಬೇಕು' ಎಂದು ಸಲಹೆ ನೀಡಿದರು.ಶ್ರೀಧರ ಮುರಡಿ ಮಠದ ಬಸವಲಿಂಗೇಶ್ವರ ಸ್ವಾಮೀಜಿ, ರಾಜೂರಿನ ಅಭಿನವ ಪಂಚಾಕ್ಷರಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶಿವನಾಗಯ್ಯಶಾಸ್ತ್ರಿ ಹಿರೇಮಠ ಪಾಲ್ಗೊಂಡಿದ್ದರು. ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಐದು ಜೋಡಿಗಳು ಪಾಲ್ಗೊಂಡು ಹೊಸ ಜೀವನಕ್ಕೆ ಪಾದಾರ್ಪಣೆ ಮಾಡಿದರು. ರಥೋತ್ಸವಕ್ಕೆ ಉಪ್ಪಲದಿನ್ನಿ ಗ್ರಾಮಸ್ಥರಿಂದ ತೇರು ಎಳೆಯುವ ಹಗ್ಗ, ಯಾಪಲದಿನ್ನಿ ಗ್ರಾಮಸ್ಥರಿಂದ ರಥೋತ್ಸವಕ್ಕೆ ಕಳಸ, ತರಲಕಟ್ಟಿ ಗ್ರಾಮಸ್ಥರಿಂದ ರಥಕ್ಕೆ ಹೂವಿನ ಹಾರವನ್ನು ಮೆರವಣಿಗೆಯ ಮೂಲಕ ತರಲಾಯಿತು.ಸಕಲ ವಾದ್ಯ ಮೇಳದೊಂದಿಗೆ ನೆರವೇರಿದ ನೂತನ ರಥೋತ್ಸವಕ್ಕೆ ಸಹಸ್ರಾರು ಸಂಖ್ಯೆಯ ಭಕ್ತರು ಸಾಕ್ಷಿಯಾಗಿದ್ದರು.ಉಪ್ಪಲದಿನ್ನಿ, ಯಾಪಲದಿನ್ನಿ, ಹಿರೇವಂಕಲಕುಂಟಾ, ತರಲಕಟ್ಟಿ, ಚಿಕ್ಕವಂಕಲಕುಂಟಾ, ಗುನ್ನಾಳ, ಹುಣಶಿಹಾಳ, ಬೋಮ್ಮನಾಳ, ಮುಸಲಾಪೂರ, ಮರಕಟ್ಟ, ನರಸಾಪೂರ, ಮಾಟಲದಿನ್ನಿ, ಬೀರಲದಿನ್ನಿ, ಮಂಡಲಮರಿ, ಮಕ್ಕಳ್ಳಿ, ಮದ್ದೂರು, ಗೆದಗೇರಿ ಸೇರಿ ಹಲವು ಗ್ರಾಮಗಳಿಂದ ಸಾಕಷ್ಟು ಸಂಖ್ಯೆಯಲ್ಲಿ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

# ಕರ್ನಾಟಕದ ಹವಾಮಾನ ವರದಿ

ನೈಜ್ಯ ದೆಸೆ ನ್ಯೂಸ್




ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ಕೆಲ ದಿನಗಳಿಂದ ಒಣ ಹವೆಯ (ಘಜಚಿಣು–ಜಡಿ ಈಠಿಡಿಜಭಿಛಿಚಿ) ವಾತಾವರಣವಿದೆ. ಕರಾವಳಿ ಮತ್ತು ಉತ್ತರ ಒಳನಾಡಿನಲ್ಲಿ ಒಣಹವೆ ಇಂದೂ ಮುಂದುವರೆಯಲಿದ್ದು, ದಕ್ಷಿಣ ಒಳನಾಡಿನಲ್ಲಿಯೂ ಶುಷ್ಕ ವಾತಾವರಣ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.ಹತ್ತಾರು ದಿನಗಳಿಂದ ರಾಜ್ಯದಲ್ಲಿ ಒಣ ಹವೆ ಆವರಿಸಿದೆ. ಬೆಂಗಳೂರಿನಲ್ಲಿ ಚಳಿಯ ಹವಾಮಾನ ತಕ್ಕಮಟ್ಟಿಗೆ ಇಂದು ಸುಧಾರಿಸಿದೆ. ಎಲ್ಲೆಲ್ಲಿ ಒಣಹವೆ? ಕರಾವಳಿಯ ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಒಣ ಹವೆಯಿರಲಿದೆ ಎಂದು ಇಲಾಖೆ ತಿಳಿಸಿದೆ. ದಕ್ಷಿಣ ಒಳನಾಡಿನ ಮೈಸೂರು , ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಚಾಮರಾಜನಗರ , ಕೋಲಾರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಬಳ್ಳಾರಿ, ತುಮಕೂರು, ಚಿಕ್ಕಬಳ್ಳಾಪುರ, ರಾಮನಗರ, ಮಂಡ್ಯ ಮತ್ತು, ಚಿತ್ರದುರ್ಗ, ದಾವಣಗೆರೆ ಮತ್ತು ವಿಜಯನಗರ ಜಿಲ್ಲೆಗಳಲ್ಲಿಯೂ ಒಣ ಹವೆಯ ವಾತಾವರಣ ಇರಲಿದೆ. ಉತ್ತರ ಒಳನಾಡು ಭಾಗದ ಜಿಲ್ಲೆಗಳಾದ ಬೆಳಗಾವಿ, ಬೀದರ್, ವಿಜಯಪುರ, ಬಾಗಲಕೋಟೆ, ಹಾವೇರಿ, ಗದಗ, ಧಾರವಾಡ, ಕಲಬುರಗಿ, ಕೊಪ್ಪಳ, ಬಳ್ಳಾರಿ, ರಾಯಚೂರು, ಯಾದಗಿರಿ ಮತ್ತು ವಿಜಯನಗರದಲ್ಲಿ ಕಳೆದ ಹಲವು ದಿನಗಳಿಂದ ಒಣಹವೆಯ ವಾತಾವರಣವಿದ್ದು, ಇಂದೂ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.ಬೆಂಗಳೂರಿನಲ್ಲಿ ಶುಷ್ಕ ವಾತಾವರಣ ಇಂದು ಬೆಂಗಳೂರಿನ ತಾಪಮಾನ ಕನಿಷ್ಠ 17ಲಿಅ ಇದ್ದು, ಗ–ರಿಷ್ಠ 31ಲಿಅ ಇರಲಿದೆ ಎಂದು ಇಲಾಖೆ ತಿಳಿಸಿದೆ. ಈ ರೀತಿಯ ತೀವ್ರ ಚಳಿಯಿಂದ ಜನರ ಆರೋಗ್ಯದಲ್ಲಿ ಏರುಪೇರಾಗುತ್ತಿದ್ದು, ಬೆಚ್ಚಗಿನ ಹೊದಿಕೆ ಹೊತ್ತುಕೊಳ್ಳಬೇಕು ಹಾಗೂ ಬಿಸಿ ಆಹಾರ ಸೇವನೆ ಮಾಡಬೇಕೆಂದು ವೈದ್ಯರು ಸೂಚಿಸಿದ್ದಾರೆ. ಇಂದು ನಗರದಲ್ಲಿ ಎಂದಿನಂತೆ ಚಳಿಯ ವಾತಾವರಣವಿರುವುದ–ರಿಂದ ಮಕ್ಕಳಿಂದ ಹಿಡಿದು ವೃದ್ಧರವರೆಗೂ ಎಚ್ಚರಿಕೆಯಿಂದಿರುವಂತೆ ಸಲಹೆ ನೀಡಿರುವ ಹವಾಮಾನ ಇಲಾಖೆ, ಬೆಚ್ಚನೆಯ ಉಡುಪು ಧರಿಸುವುದರ ಜೊತೆಗೆ ಸಮತೋಲನ ಆಹಾರ ಸೇವನೆಗೆ ಒತ್ತು ನೀಡುವಂತೆ ಸಲಹೆ ನೀಡಿದೆ.

# ಶಿವನನ್ನೊಲಿಸಿಕೊಂಡ ಬೇಡರ ಕಣ್ಣಪ್ಪ

ನೈಜ್ಯ ದೆಸೆ ನ್ಯೂಸ್

ಇಂದಿನ ಆಂಧ್ರಪ್ರದೇಶದ ಶ್ರೀ ಕಾಳಹಸ್ತಿಯಲ್ಲಿ. ಅಲ್ಲಿನ ದಟ್ಟಾರಣ್ಯದಲ್ಲಿ ಶಿವಲಿಂಗವೊಂದಿತ್ತು. ಅರ್ಚಕರೊಬ್ಬರು ಪ್ರತಿದಿನ ವಿಧಿವತ್ತಾಗಿ ಪೂಜೆ ಸಲ್ಲಿಸುತ್ತಿದ್ದರು . ಆ ಕಾಡಿನಲ್ಲೇ ಬೇಡರ ಗುಂಪೊಂದು ವಾಸವಾಗಿತ್ತು. ಅದರ ಮುಖ್ಯಸ್ಥನೇ ಕಣ್ಣಪ್ಪ (ತಿನ್ನ) . ಒಂದು ದಿನ ಬೇಟೆಯಾಡಲು ಬಂದ ಕಣ್ಣಪ್ಪ, ಆ ದೇವಸ್ಥಾನವನ್ನು ಪ್ರವೇಶಿಸಿದ. ಲಿಂಗವನ್ನು ನೋಡಿದ ಕೂಡಲೇ ಆತನ ಮನಸ್ಸಿನಲ್ಲಿ ಅಪಾರವಾದ ಶಿವಭಕ್ತಿ ಉಕ್ಕಿ ಹ–ರಿಯಿತು .ಅಂದಿನಿಂದ, ಪ್ರತಿನಿತ್ಯ ಬೇಟೆಯಾಡಿದ ಮಾಂಸವನ್ನೇ ತನ್ನ ಪ್ರೀತಿಯ ಶಿವನಿಗೆ ನೈವೇದ್ಯ ಮಾಡಲು ಆರಂಭಿಸಿದ. ಬಾಯಲ್ಲಿ ತುಂಬಿಕೊಂಡು ತಂದ ನೀರಿನಿಂದ ಅಭಿಷೇಕ ಮಾಡುತ್ತಿದ್ದ. ಆತನಿಗೆ ಪೂಜಾ ವಿಧಾನಗಳು ಗೊತ್ತಿರಲಿಲ್ಲ; ಅವನ ಬಳಿ ಇದ್ದದ್ದು ಅಪಾರ ಪ್ರೇಮ ಮಾತ್ರ . ಕಣ್ಣಪ್ಪನ ಈ ಕ್ರಮದಿಂದ ಅರ್ಚಕರಿಗೆ ತುಂಬಾ ಬೇಸರವಾಗುತ್ತಿತ್ತು. ಏಕೆಂದರೆ ಪ್ರತಿದಿನ ಬೆಳಿಗ್ಗೆ ದೇವಸ್ಥಾನಕ್ಕೆ ಬಂದಾಗ ಅಲ್ಲಿ ಮಾಂಸ, ರಕ್ತದ ಕಲೆಗಳು ಕಂಡುಬರುತ್ತಿದ್ದವು .ಪರೀಕ್ಷೆ ಮತ್ತು ಶಿವನ ಅನುಗ್ರಹ ಒಂದು ದಿನ, ಅರ್ಚಕರು ಪೂಜೆ ಸಲ್ಲಿಸುತ್ತಿರುವಾಗ ಲಿಂಗದ ಮೇಲೆ ಎರಡು ಕಣ್ಣುಗಳು ಕಾಣಿಸಿಕೊಂಡವು. ಸ್ವಲ್ಪ ಸಮಯದಲ್ಲೇ ಆ ಕಣ್ಣುಗಳಿಂದ ರಕ್ತ ಸೋರಲಾರಂಭವಾಯಿತು. ಭಯಗೊಂಡ ಅರ್ಚಕರು ಅದನ್ನು ಅಪಶಕುನವೆಂದು ಭಾವಿಸಿ ಸ್ಥಳದಿಂದ ಓಡಿಹೋದರು . ರಾತ್ರಿ ಬಂದ ಕಣ್ಣಪ್ಪ, ತನ್ನ ಪ್ರಿಯ ಶಿವನ ಕಣ್ಣುಗಳಿಂದ ರಕ್ತ ಸೋರುವುದನ್ನು ಕಂಡು ವ್ಯಥೆಗೊಳಗಾದ. ತನ್ನ ಬಳಿ ಇದ್ದ ಗಿಡಮೂಲಿಕೆಗಳನ್ನು ಹಚ್ಚಿದನಾದರೂ ರಕ್ತಸ್ರಾವ ನಿಲ್ಲಲಿಲ್ಲ .ತನ್ನ ಪ್ರಭುವಿನ ನೋವು ನೋಡಲಾರದೆ, ಆತ ತನ್ನ ಬಾಣದಿಂದ ತನ್ನ ಒಂದು ಕಣ್ಣನ್ನು ಕಿತ್ತು ಲಿಂಗದ ರಕ್ತಸ್ರಾವವಾಗುತ್ತಿರುವ ಕಣ್ಣಿನ ಮೇಲೆ ಇಟ್ಟ. ರಕ್ತಸ್ರಾವ ನಿಂತಿತು. ಆದ–ರೆ ಸ್ವಲ್ಪ ಸಮಯದಲ್ಲೇ ಲಿಂಗದ ಇನ್ನೊಂದು ಕಣ್ಣೂ ರಕ್ತ ಸುರಿಸಲಾರಂಭಿಸಿತು . ಈಗ ಕಣ್ಣಪ್ಪನ ಸಮಸ್ಯೆ ಎಂದರೆ, ತನ್ನ ಇನ್ನೊಂದು ಕಣ್ಣನ್ನೂ ಕಿತ್ತು ಲಿಂಗದ ಮೇಲಿಟ್ಟರೆ, ತನಗೆ ಕಾಣಿಸುವುದಿಲ್ಲವಲ್ಲ ಎಂಬುದು. ತಕ್ಷಣವೇ ಆತ ತನ್ನ ಕಾಲಿನ ಹೆಬ್ಬೆರಳನ್ನು ರಕ್ತಸ್ರಾವವಾಗುತ್ತಿರುವ ಎರಡನೇ ಕಣ್ಣಿನ ಮೇಲಿಟ್ಟು ಗುರುತು ಮಾಡಿಕೊಂಡು, ತನ್ನ ಉಳಿದ ಕಣ್ಣನ್ನೂ ಕಿತ್ತುಕೊಳ್ಳಲು ಸಿದ್ಧನಾದ .ಶಿವನ ಒಲುಮೆ ಇಷ್ಟು ದೊಡ್ಡ ತ್ಯಾಗ, ಅಪಾರ ಪ್ರೇಮ ಕಂಡು ಶಿವನು ಪುಳಕಿತನಾದ. ಕೂಡಲೇ ಪ್ರತ್ಯಕ್ಷನಾಗಿ ಕಣ್ಣಪ್ಪನ ಕೈಹಿಡಿದು ತಡೆದನು. ಆತನ ಭಕ್ತಿಗೆ ಮೆಚ್ಚಿ, ಅವನಿಗೆ ಕಣ್ಣುಗಳನ್ನು ಮರಳಿ ನೀಡಿ, ಮುಕ್ತಿಯನ್ನು ಅನುಗ್ರಹಿಸಿದನು . ಕಣ್ಣಪ್ಪನನ್ನು ತಮ್ಮ ಪರಮ ಭಕ್ತರಲ್ಲಿ ಒಬ್ಬರಾಗಿ ಸ್ವೀಕರಿಸಿದನು . ಅಂದಿನಿಂದ ಈತನು ನಾಯನ್ಮಾರ್ (ಶೈವ ಸಂತರು) ಪಟ್ಟವನ್ನು ಪಡೆದು ಪೂಜಿಸಲ್ಪಡುತ್ತಾನೆ .ಈ ಘಟನೆಯೇ ಭಕ್ತಿ–ವಿಶ್ವಾಸಗಳ ಸಂಕೇತವಾಗಿ ಮಹಾಶಿವರಾತ್ರಿಯಂದು ಸ್ಮ–ರಿಸಲ್ಪಡುತ್ತದೆ. ಈ ಕಥೆಯು ದಕ್ಷಿಣ ಭಾರತದಲ್ಲಿ, ವಿಶೇಷವಾಗಿ ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಬಹು ಜನಪ್ರಿಯವಾಗಿದೆ.ಬೇಡರ ಕಣ್ಣಪ್ಪನ ಕಥೆ ನಮಗೆ ಕಲಿಸುವ ಸಂದೇಶವೆಂದರೆ, ದೇವರನ್ನು ಮುಟ್ಟಲು ವಿದ್ಯೆ, ಆಚಾರಗಳಿಗಿಂತ ಪ್ರಾಮಾಣಿಕ ಭಾವ ಮತ್ತು ನಿಷ್ಕಲ್ಮಶ ಪ್ರೇಮವೇ ಮುಖ್ಯ. ದೇವರು ಭಾವಪ್ರಿಯನೇ ಹೊರತು ಬಾಹ್ಯಪ್ರಿಯನಲ್ಲ ಎಂಬುದಕ್ಕೆ ಬೇಡರ ಕಣ್ಣಪ್ಪನೇ ಸಾಕ್ಷಿಯಾಗಿದ್ದಾನೆ .



ಆಂಜನೇಯ ನಸಲಾಪುರ ಉಪನ್ಯಾಸಕರು

## ಶಿಕ್ಷಣ ಮಾರ್ಗದರ್ಶಿ ವಿಶೇಷ

### B.V.Sc & A.H

ಬ್ಯಾಚುಲರ್ ಆಫ್ ವೆಟರ್ನರಿ ಸೈನ್ಸ್ ಅಂಡ್ ಅನಿಮಲ್ ಹಸ್ಬೆಂಡರಿ (B.V.Sc & A.H) 5.5 ವರ್ಷಗಳ ಪದವಿ ಕೋರ್ಸ್ ಆಗಿದ್ದು, ಪ್ರಾಣಿಗಳ ಚಿಕಿತ್ಸೆ ಮತ್ತು ಸಾಕಾಣಿಕೆ ಬಗ್ಗೆ ಕಲಿಸುತ್ತದೆ. ಈ ಕೋರ್ಸ್‌ಗೆ ಸೇರಲು 10+2 (PUC) ನಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಇಂಗ್ಲಿಷ್‌ನಲ್ಲಿ ಕನಿಷ್ಠ 50% ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು ಮತ್ತು ಕೆಇಎ (KEA) [1]En (CET) ಪರೀಕ್ಷೆಯನ್ನು ತೆಗೆದುಕೊಳ್ಳಬೇಕು. ಕೋರ್ಸ್ ವಿವರಗಳು (B.V.Sc & A.H Course Details):ಅವಧಿ: 5.5 ವರ್ಷಗಳು (4.5 ವರ್ಷಗಳ ಶೈಕ್ಷಣಿಕ ಅಧ್ಯಯನ + 1 ವರ್ಷದ ಕಡ್ಡಾಯ ಇಂಟರ್ನ್‌ಶಿಪ್). ಅರ್ಹತೆ: ವಿಜ್ಞಾನ ವಿಭಾಗದಲ್ಲಿ (ಕಅಃ) ದ್ವಿತೀಯ ಪಿಯುಸಿ ಅಥವಾ ತತ್ಸಮಾನ ಪರೀಕ್ಷೆ.ವಯೋಮಿತಿ: ಸಾಮಾನ್ಯವಾಗಿ 17–25 ವರ್ಷಗಳ ನಡುವೆ (ನಿಯಮಗಳ ಪ್ರಕಾರ ಸಡಿಲಿಕೆ ಇರಬಹುದು).ಪ್ರವೇಶಾತಿ: ಕರ್ನಾಟಕದಲ್ಲಿ ಕೆಇಎ (ಏಇಂ) ನಡೆಸುವ ಏಅಇಖ ಪರೀಕ್ಷೆಯ ಮೂಲಕ ಪ್ರವೇಶ. ಕೋರ್ಸ್ ವಿಷಯಗಳು (Syllabџ):ಪಶುವೈದ್ಯಕೀಯ ಅನ್ಯಾಟಮಿ, ಫಿಸಿಯಾಲಜಿ, ಬಯೋಕೆಮಿಸ್ಟ್ರಿ, ನ್ಯೂಟ್ರಿಷನ್, ಲೈವ್‌ಸ್ಟಾಕ್ ಪ್ರೊಡಕ್ಷನ್ ಮ್ಯಾನೇಜ್‌ಮೆಂಟ್, ಪಶು ಆನುವಂಶಿಕತೆ (Genetics), ಮತ್ತು ರೋಗಗಳ ಚಿಕಿತ್ಸೆ (Pathology) ಸೇರಿವೆ. ವೃತ್ತಿಜೀವನದ ಅವಕಾಶಗಳು (Career Scope):ಪಶುವೈದ್ಯಕೀಯ ವೈದ್ಯರು (Veterinary Doctor): ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗಳಲ್ಲಿ. ಜಾನುವಾರು ಅಭಿವೃದ್ಧಿ ಅಧಿಕಾರಿ: ಕೃಷಿ ಇಲಾಖೆಗಳು.ಪಶು ಆಹಾರ ತಂತ್ರಜ್ಞರು (Animal Nutritionist): ಫೀಡ್ ಕಂಪನಿಗಳಲ್ಲಿ.ವನ್ಯಜೀವಿ ಚಿಕಿತ್ಸಕರು (Wildlife Veterinarian): ಪ್ರಾಣಿ ಸಂಗ್ರಹಾಲಯಗಳಲ್ಲಿ.ಸ್ವಯಂ ಉದ್ಯೋಗ: ಸ್ವಂತ ಪಶುವೈದ್ಯಕೀಯ ಚಿಕಿತ್ಸಾಲಯ (Clinic) ಸ್ಥಾಪನೆ. ಕರ್ನಾಟಕದಲ್ಲಿ ಪ್ರಮುಖ ಕಾಲೇಜುಗಳು: ಪಶುವೈದ್ಯಕೀಯ ಕಾಲೇಜು, ಹೆಬ್ಬಾಳ, ಬೆಂಗಳೂರು.ಪಶುವೈದ್ಯಕೀಯ ಕಾಲೇಜು, ಬೀದರ್ (KVAFSU).ಪಶುವೈದ್ಯಕೀಯ ಕಾಲೇಜು, ಶಿವಮೊಗ್ಗ. ಹೆಚ್ಚಿನ ಮಾಹಿತಿಗಾಗಿ ಕೆಇಎ ವೆಬ್‌ಸೈಟ್ ಅಥವಾ ಕೆವಿಎಎಫ್–ಎಸ್‌ಯು (KVAFSU) ವೆಬ್‌ಸೈಟ್ ಪರಿಶೀಲಿಸಬಹುದು.

# ಶಿಕ್ಷಣದ ಜೊತೆ ಮಕ್ಕಳಿಗೆ ಉತ್ತಮ ಸಂಸ್ಕಾರ ಕಲಿಸಿ: ಡಾ. ಪ್ರಭುಗೌಡ

**ನೈಜ್ಯ ದೆಸೆ ನ್ಯೂಸ್**

ತಾಳಿಕೋಟಿ: ಮನುಷ್ಯ ಸಂಪಾದಿಸುವ ಸಕಲ ಸಂಪತ್ತುಗಳಲ್ಲಿ ವಿದ್ಯೆ ಸರ್ವಶ್ರೇಷ್ಠ ಸಂಪತ್ತಾಗಿದೆ ಅದು ನಮ್ಮ ಬದುಕಿಗೆ ಘನತೆ ತಂದು ಕೊಡುತ್ತದೆ. ಸಮುದಾಯಗಳ ಪ್ರಗತಿ ಹಾಗೂ ಅವನತಿ ಶಿಕ್ಷಣವನ್ನೇ ಅವಲಂಬಿಸಿದೆ ಎಂದು ಖ್ಯಾತ ನೇತ್ರ ತಜ್ಞ ಡಾ.ಪ್ರಭುಗೌಡ ಲಿಂಗದಳ್ಳಿ ಹೇಳಿದರು. ಪಟ್ಟಣದ ರಿಲಾಯನ್ಸ್ ಎಜುಕೇಷನ್ ಸೊಸೈಟಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯ "ಮೆಜೆಸ್ಟಿಕ್ ವಿಷನ್ 2ಞ26" ಕಾರ್ಯಕ್ರಮದಲ್ಲಿ ಶನಿವಾರ ಮಾತನಾಡಿದರು. ಇವತ್ತು ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಜೊತೆ ಉತ್ತಮ ಸಂಸ್ಕಾರಗಳನ್ನೂ ಕಲಿಸಿ ಕೊಡುವ ಅಗತ್ಯವಿದೆ. ಸಮಾಜಕ್ಕೆ ಕಲಿತವರಿಂದ ಕೇಡಾಗಬಹುದು ಆದರೆ ಸಂಸ್ಕಾರವಂತರಿಂದ ಕೇಡಕಾಗಲು ಸಾಧ್ಯವಿಲ್ಲ. ನಾಲ್ಕು ದಶಕಗಳಿಂದ ಈ ಸಂಸ್ಥೆಯನ್ನು ನಡೆಸುತ್ತಿರುವುದು ಅಧ್ಯಕ್ಷ ನಮಾಜ–ಕಟ್ಟಿ ಅವರ ಪರಿಶ್ರಮ ಹಾಗೂ ಸಾಮೂದಾಯಿಕ ಕಾಳಜಿಯನ್ನು ಎತ್ತಿ ತೋರಿಸುತ್ತದೆ ಎಂದರು. ಸಮಾರಂಭ ಉದ್ಘಾಟಿಸಿ ಬಿಇಓ ಸಾವಳಗಿ ಅವರು ಮಾತನಾಡಿ ಮಕ್ಕಳಲ್ಲಿ ಇವತ್ತು ಶಿಕ್ಷಣದ ಜೊತೆ ವಿಶ್ವಮಾನವ ಕಲ್ಪನೆಯನ್ನು ಬೆಳೆಸಬೇಕಾಗಿದೆ,



ಅವರನ್ನು ದೇಶದ ಒಳ್ಳೆಯ ಪ್ರಜೆ ಹಾಗೂ ಸಮಾಜದ ಜವಾಬ್ದಾರಿಯುತ ನಾಗರಿಕನನ್ನಾಗಿ ಮಾಡುವುದು ಅಗತ್ಯವಾಗಿದೆ ಎಂದರು. ಕಾಂಗ್ರೆಸ್ ಯುವ ಮುಖಂಡ ಸುರೇಶಧಣಿ ನಾಡಗೌಡ(ಬಿಂಜಲಭಾವಿ) ಅವರು ಮಾತನಾಡಿ ಶಿಕ್ಷಣ ಸಂಸ್ಥೆಗಳು ವ್ಯಾಪಾರಿ ಕೇಂದ್ರಗಳಾಗಬಾರದು, ದೇಶದ ಭವಿಷ್ಯ ನಿರ್ಮಿಸುವ ಕೆಲಸ ಅವರು ಮಾಡುತ್ತಿದ್ದಾರೆ ಅವರ ಮೇಲೆ ದೊಡ್ಡ ಜವಾಬ್ದಾರಿ ಇದೆ. ಮಕ್ಕಳ ಸರ್ವಾಂಗೀಣ ಪ್ರಗತಿಯಲ್ಲಿ ತಾಯಂದಿರ ಪಾತ್ರ ಬಹು ದೊಡ್ಡದಾಗಿದೆ ಈ ಸಂಸ್ಥೆಯಲ್ಲಿ ಶಿಕ್ಷಣ ಜೊತೆ ಸಂಸ್ಕಾರವನ್ನು ಕೊಡುವ ಕೆಲಸ ಮಾಡುತ್ತಿರುವುದು ಸಂತೋಷದ ವಿಷಯವಾಗಿದೆ ಎಂದರು. ಖಾಸ್ಗತೇಶ್ವರ ಮಠದ ಪೂಜ್ಯ ಸಿದ್ದಲಿಂಗ ಮಹಾಸ್ವಾಮಿಗಳು ಹಾಗೂ ಮುಸ್ಲಿಂ ಧಾರ್ಮಿಕ ಮುಖಂಡ ಸೈಯದ್ ಶಕೀಲ ಅಹ್ಮದ್ ಖಾಜಿ ಸಾನಿಧ್ಯ ವಹಿಸಿದ್ದರು. ರಿಲಾಯನ್ಸ್ ಎಜುಕೇಶನ್ ಸೊಸೈಟಿ ಚೇರಮನ್ ಎ.ಎಸ್.ನಮಾಜಕಟ್ಟಿ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಸಂಸ್ಥೆಯಲ್ಲಿ 14 ವರ್ಷಗಳ ಕಾಲ ಅನುಪಮ ಸೇವೆ ಸಲ್ಲಿಸಿದ ಆದ–ರ್ಶ ಶಿಕ್ಷಕ ಜಿಲಾನಿ ವಿಜಾಪೂರ ಇವರಿಗೆ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಇಸಿಓ ಆರ್.ಬಿ.ದಮ್ಮೂರಮಠ, ನಿವೃತ್ತ ಶಿಕ್ಷಕ ಸೈಯದ್ ಫಸಿಯುದ್ದೀನ ಖಾಜಿ, ಅಂಜುಮಾನ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಅಬ್ದುಲ್ ರಜಾಕ ಮನಗೂಳಿ,ವಕೀಲ ಐ.ಎ.ಜಮಾದಾರ, ಸಿದ್ದಗಂಗಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವಿರೇಶ ಮೇಟಿ, ನಿವೃತ್ತ ರಿಜಿಸ್ಟರ್ ಐ.ಎ.ಭಕ್ಷಿ,ಡಾ.ಸಿರಾಜ ಬಳಿಗಾರ,ಅಬೂಬಕರ ಲಾಹೋರಿ,ಶಫೀಕ ಇನಾಮದಾರ,ಬಂದಗಿಸಾಬ ವಠಾರ,ಬಾಲು ತಳವಾರ, ಸಿಆರ್‌ಸಿಗಳಾದ ರಾಜು ವಿಜಾಪುರ,ಜಾವೀದ ಎಕೀನ,ಇಬ್ರಾಹೀಮ ಆಲಮೇಲ, ಪ್ರಾಚಾರ್ಯರಾದ ಮೊಹಮ್ಮದ್ ಅಶ್ಫಾಕ್,ಗುಲಾಮ ಡೋಣಿ,ಫಾರೂಖ ಬಿಳವಾರ, ಆರೀಫ ಕಂಕರವಾಲೆ,ಮೊಹಮ್ಮದ ಇಸಾಕ್, ಆಡಳಿತ ಮಂಡಳಿ ಸದಸ್ಯರು ಸಿಬ್ಬಂದಿ ವರ್ಗ ಪಾಲಕರು ಹಾಗೂ ವಿದ್ಯಾರ್ಥಿಗಳು ಇದ್ದರು.



# ಅಗ್ನಿವೀರ್ ಸೇನಾ ನೇಮಕಾತಿ ರ್‍ಯಾಲಿ ಯಶಸ್ವಿ



**ನೈಜ್ಯ ದೆಸೆ ನ್ಯೂಸ್**

ಸೇನೆಗೆ ಸೇರುವ ಮನಃಸ್ಥಿತಿಯ ಯುವಕರ ಹಂಬಲ, ಸ್ಥೈರ್ಯಗಳಿಗೆ ಮೂಡುಬಿದಿರೆಯ ಸ್ವರಾಜ್ಯ ಮೈದಾನದಲ್ಲಿ ಜ. 30ರಿಂದ ಫೆ.11ರ ವರೆಗೆ ನಡೆದ ಅಗ್ನಿವೀರ್‌ಸೇನಾ ನೇಮಕಾತಿಗಾಗಿ ನಡೆದ ರ್‍ಯಾಲಿ ಸಾಕ್ಷಿಯಾಯಿತು. ಭಾರತೀಯ ಸೇನೆಯ ಅಗ್ನಿಪಥ ಯೋಜನೆಯಡಿ ಜಿಲ್ಲಾಡಳಿತದ ಉಸ್ತುವಾರಿಯಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಸಹಕಾರ ದಲ್ಲಿ ನಡೆದ ಈ ರ್‍ಯಾಲಿ ಸುಗಮ ನಿರ್ವಹಣೆ ಹಾಗೂ ವ್ಯವಸ್ಥಿತ ಯೋಜನೆ ಯೊಂದಿಗೆ ಯಶಸ್ವಿಯಾಗಿ ನಡೆದಿದೆ. ಅಭ್ಯರ್ಥಿಗಳ ದೈಹಿಕ ಪರೀಕ್ಷೆಗಳು ಫೆ. 8ರಂದು ಹಾಗೂ ವೈದ್ಯಕೀಯ ಪರೀಕ್ಷೆಗಳು ಫೆ. 11ರಂದು ಪೂರ್ಣಗೊಂಡಿದೆ. ವೈದ್ಯಕೀಯ ತಪಾಸಣೆಯಲ್ಲಿ ಹೆಚ್ಚಿನ ಪರಿಶೀಲನೆ ಅಗತ್ಯವಿರುವ ಕೆಲವು ಅಭ್ಯರ್ಥಿಗಳನ್ನು ಬೆಂಗಳೂರಿನ ಮಿಲಿಟರಿ ಆಸ್ಪತ್ರೆಗೆ ಕಳುಹಿಸಲಾಗುವುದು ಎಂದು ಸೇನಾ ಅಧಿಕಾರಿಗಳು ತಿಳಿಸಿದ್ದಾರೆ.ರಾಜ್ಯದ 11 ಜಿಲ್ಲೆಗಳಿಂದ 8,500ಕ್ಕೂ ಹೆಚ್ಚು ಯುವಕರು ಭಾಗವಹಿಸಿದ್ದರು. ವಿಜಯಪುರ, ಬಾಗಲಕೋಟೆ, ಧಾರವಾಡ, ದಾವಣಗೆರೆ, ಚಿಕ್ಕಮಗಳೂರು, ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಹಾವೇರಿ ಹಾಗೂ ಗದಗ ಜಿಲ್ಲೆಗಳ ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಅರ್ಹತೆ ಪಡೆದು ರ್‍ಯಾಲಿಗೆ ಹಾಜರಾಗಿದ್ದರು. ಆಯ್ಕೆ ಪ್ರಕ್ರಿಯೆ ಲಿಖಿತ, ದೈಹಿಕ ಮತ್ತು ವೈದ್ಯಕೀಯ ಎಂಬ ಮೂರು ಹಂತಗಳಲ್ಲಿ ನಡೆದಿದ್ದು, ಪ್ರತಿ ಹಂತದಲ್ಲೂ ಕಟ್ಟುನಿಟ್ಟಿನ ಮಾನದಂಡಗಳನ್ನು ಅನುಸರಿಸಲಾಯಿತು. ಆಳ್ವಾಸ್‌ನಿಂದ ವ್ಯವಸ್ಥಿತ ಸೇವೆ ರ್‍ಯಾಲಿಗೆ ಆಗಮಿಸಿದ ಸಾವಿರಾರು ಅಭ್ಯರ್ಥಿಗಳಿಗೆ ಆಳ್ವಾಸ್ ಸಂಸ್ಥೆ ವಸತಿ, ಸ್ವಚ್ಛ ಶೌಚಾಲಯ, ಗುಣಮಟ್ಟದ ಊಟೋಪಚಾರ ಹಾಗೂ ವೈದ್ಯಕೀಯ ನೆರವು ಒದಗಿಸಿದೆ. ರ್‍ಯಾಲಿ ನಿರ್ವಹಣೆಯಲ್ಲಿ ತೊಡಗಿದ್ದ ಸೇನಾ ಹಾಗೂ ಆಡಳಿತಾಧಿಕಾರಿಗಳಿಗೂ ವಸತಿ ವ್ಯವಸ್ಥೆ ಕಲ್ಪಿಸಲಾಗಿತ್ತು. ಆಳ್ವಾಸ್‌ನ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಸ್ವಯಂ ಸೇವಕರಾಗಿ ತೊಡಗಿಸಿಕೊಂಡಿದ್ದು ರ್‍ಯಾಲಿಯ ಯಶಸ್ವಿಗೆ ಸಹಕರಿಸಿದ್ದರು."ಅಗ್ನಿವೀರ್ ರ್‍ಯಾಲಿ ಕೇವಲ ನೇಮಕಾತಿ ಪ್ರಕ್ರಿಯೆಯಲ್ಲ; ಯುವ ಮನಸ್ಸುಗಳಲ್ಲಿ ದೇಶಸೇವೆಯ ಉತ್ಸಾಹವನ್ನು ಮತ್ತಷ್ಟು ಗಟ್ಟಿಗೊಳಿಸಿದ ಮಹತ್ವದ ಅಧ್ಯಾಯವಾಗಿದೆ. ಆಡಳಿತ, ಸಂಘಟಿತ ವ್ಯವಸ್ಥೆ ಮತ್ತು ಸೇವಾಭಾವದ ಅಪರೂಪದ ಸಮನ್ವಯಕ್ಕೆ ರ್‍ಯಾಲಿ ಸಾಕ್ಷಿಯಾಗಿದೆ.ಈ ಮಹತ್ವದ ಕೆಲಸದಲ್ಲಿ ನಮ್ಮ ಸಂಸ್ಥೆಯು ಭಾಗಿಯಾಗಿರುವುದು ನಮ್ಮ ಭಾಗ್ಯ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ। ಎಂ. ಮೋಹನ ಆಳ್ವ ತಿಳಿಸಿದ್ದಾರೆ.

## ಸರ್ವಜ್ಞ ವಿದ್ಯಾಪೀಠದಲ್ಲಿ ಸೇವಾಲಾಲ್ ಜಯಂತಿ ಆಚರಣೆ

**ನೈಜ್ಯ ದೆಸೆ ನ್ಯೂಸ್**




ತಾಳಿಕೋಟಿ: ಪಟ್ಟಣದ ಸರ್ವಜ್ಞ ವಿದ್ಯಾಪೀಠ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಶ್ರೀ ಸಂತ ಸೇವಾಲಾಲರ 287 ನೇ ಜಯಂತೋತ್ಸವವನ್ನು ರವಿವಾರ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥಾಪಕ ಅಧ್ಯಕ್ಷರಾದ ಸಿದ್ದನಗೌಡ ಮಂಗಳೂರ ಮುಖ್ಯಗುರುಗಳಾದ ಸಂತೋಷ ಪವಾರ, ಸಿಬ್ಬಂದಿ ವರ್ಗದವರಾದ ಸಿದ್ದನಗೌಡ ಮುನ್ನೂರ, ಸಂಗಮೇಶ ಬಿರಾದಾರ ರವಿಕುಮಾರ ಅನಧಿನ್ನಿ, ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಳಕ್ಕೆ ಹಲವು ಕಾರ್ಯಕ್ರಮ: ಜಗದೀಶ

**ನೈಜ್ಯ ದೆಸೆ ನ್ಯೂಸ್**

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಫಲಿತಾಂಶ ಹೆಚ್ಚಿಸಲು ಇಲಾಖೆ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿದೆ ಎಂದು ಉಪ ಪ್ರಾಂಶುಪಾಲ ಜಗದೀಶ ಹಾದಿಮನಿ ತಿಳಿಸಿದರು. ಜಿಲ್ಲಾಡಳಿತ. ಜಿಲ್ಲಾ ಪಂಚಾಯಿತಿ ಕೊಪ್ಪಳ, ಶಾಲಾ ಶಿಕ್ಷಣ ಇಲಾಖೆ ಹಾಗೂ ಶ್ರೀಮತಿ ಪಾರ್ವತೆಮ್ಮ ಬಸನಗೌಡ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಟ್ರಸ್ಟ್ ಸಹಯೋಗದಲ್ಲಿ ಇಲ್ಲಿನ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಈಚೆಗೆ ಆಯೋಜಿಸಿದ್ದ ವಿಜ್ಞಾನ ವಿಷಯದ ಕುರಿತು ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.ಪರೀಕ್ಷೆ ಒಂದು ಹಬ್ಬದಂತೆ ಆಚ–ರಣೆ ಮಾಡಬೇಕು. ಎಸ್‌ಎಸ್‌ಎಲ್‌ಸಿ ಫಲಿತಾಂಶ



ಹೆಚ್ಚಳ ಮಾಡುವ ನಿಟ್ಟಿನಲ್ಲಿ ಶಿಕ್ಷಕರ ಶ್ರಮದ ಜತೆಗೆ ವಿದ್ಯಾರ್ಥಿಗಳ ಶ್ರದ್ದೆ, ಅಧ್ಯಯನ ಸಹ ಮುಖ್ಯವಾಗಿದೆ' ಎಂದು ತಿಳಿಸಿದರು.ಸಂಪನ್ಮೂಲ ವ್ಯಕ್ತಿ ಸಿದ್ದಲಿಂಗಯ್ಯ ಅವರು ವಿಜ್ಞಾನದ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆಯುವದು ಹೇಗೆ ಎಂಬುದು ಕುರಿತು ಉಪನ್ಯಾಸ ನೀಡಿದರು.ವಿಜ್ಞಾನ ಶಿಕ್ಷಕ ರಾಜೇಶ್ವರರೆಡ್ಡಿ ಮಾತನಾಡಿದರು. ಟ್ರಸ್ಟ್ ಅಧ್ಯಕ್ಷ ಮಲ್ಲಿಕಾರ್ಜುನ ಗೌಡ, ಕರ್ನಾಟಕ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ತಾಲ್ಲೂಕು ಅಧ್ಯಕ್ಷ ಅನಿಲಕುಮಾರ, ಶಿಕ್ಷಕರಾದ ಕನಕಾಚಲ. ಮೌನೇಶ ಬಡಿಗೇರ ಇದ್ದರು.ಗಣಿತಕಾರ್ಯಾಗಾರ: ಸಮೀಪದ ಕಲಕೇರಿ ಸರ್ಕಾರಿ ಪ್ರೌಢಶಾಲೆಯಲ್ಲಿ ಪಾರ್ವತಮ್ಮ ಬಸವನಗೌಡ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಟ್ರಸ್ಟ್ ವತಿಯಿಂದ ಶನಿವಾರ ಗಣಿತ ವಿಷಯದ ಕಾರ್ಯಾಗಾರ ನಡೆಯಿತು. ಗಣಿತ ಶಿಕ್ಷಕ ಮಹಾದೇವಸ್ವಾಮಿ, ಮುಖ್ಯ ಶಿಕ್ಷಕ ಬಸಪ್ಪ ಕರಾಬದಿನ್ನಿ, ಟ್ರಸ್ಟ್ ಅಧ್ಯಕ್ಷ ಮಲ್ಲಿಕಾರ್ಜುನ ಗೌಡ ಪಾಟೀಲ ಮಾತನಾಡಿದರು.ಗಣಿತ ಸಂಪನ್ಮೂಲ ವ್ಯಕ್ತಿ ಶ್ರೀಧರ ಲಂಬು ಗಣಿತದ ಸಮಸ್ಯೆಗಳನ್ನು ಸರಳವಾಗಿ ಬಿಡಿಸುವ ವಿಧಾನ ಹಾಗೂ ಪರೀಕ್ಷೆಯ ಟಿಪ್ಸ್ ಗಳನ್ನು ತಿಳಿಸಿದರು.

# ಬೆಳಿಗ್ಗೆಯಿಂದಲೇ ದೇಗುಲಗಳಲ್ಲಿ ವಿಶೇಷ ಪೂಜೆ ಮತ್ತು ಅಭಿಷೇಕ





**ನೈಜ್ಯ ದೆಸೆ ನ್ಯೂಸ್**

ಧಾರವಾಡ : ಜಿಲ್ಲೆಯಲ್ಲಿ ಶಿವರಾತ್ರಿ ಹಬ್ಬವನ್ನು ಭಾನುವಾರ ಶ್ರದ್ಧೆ, ಭಕ್ತಿ, ಸಂಭ್ರಮದಿಂದ ಆಚ–ರಿಸಲಾಯಿತು. ಬೆಳಿಗ್ಗೆಯಿಂದಲೇ ದೇಗುಲಗಳಲ್ಲಿ ವಿಶೇಷ ಪೂಜೆ, ಅಭಿಷೇಕ ಮೊದಲಾದ ಕಾರ್ಯ ನೆರವೇರಿಸಲಾಯಿತು.ದೇಗುಲಗಳಲ್ಲಿ ತಳಿರು ತೋರಣ ಕಟ್ಟಿ, ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು.ದೇವರ ವಿಗ್ರಹ, ಶಿವಲಿಂಗಗಳನ್ನು ವಿವಿಧ ಪುಷ್ಪಗಳು, ಬಿಲ್ವಪತ್ರೆಗಳಿಂದ ಅಲಂಕ–ರಿಸಲಾಗಿತ್ತು. ಭಕ್ತರು ಬೆಳಿಗ್ಗೆಯಿಂದಲೇ ದೇಗುಲಗಳಲ್ಲಿ ದೇವರ ಮೂರ್ತಿ ದರ್ಶನಕ್ಕೆ ಸಾಲುಗಟ್ಟಿ ನಿಂತಿದ್ದರು. ಧಾರವಾಡದ ಕೊಪ್ಪದಕೇರಿ ಶಿವಾಲಯದಲ್ಲಿ ದೇವರ ವಿಗ್ರಹವನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು ಶಿವರಾತ್ರಿ ಅಂಗವಾಗಿ ಭಕ್ತರು ವಿಶೇಷ ಪೂಜೆ ನೆರವೇರಿಸಿದರು. ಕ್ಷೀರ, ಫಲ, ನೈವೇದ್ಯ ಅರ್ಪಿಸಿ ಭಕ್ತಿ ಸಮರ್ಪಿಸಿದರು. ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ದೇವರ ವಿಗ್ರಹ, ಶಿವಲಿಂಗ ದರ್ಶನ ಮಾಡಿ ಪುನೀತ ಭಾವ ಮೆರೆದರು.ಧಾರವಾಡದ ಕೆಲಗೇರಿಯ ಕಲ್ಮೇಶ್ವರ ದೇಗುಲದಲ್ಲಿ ಭಕ್ತರು ಶಿವಲಿಂಗಕ್ಕೆ ಪೂಜೆ ನೆರವೇರಿಸಿದರು.ಸೋಮೇಶ್ವರ ದೇಗುಲ, ಕೆಲಗೇರಿಯ ಕಲ್ಮೇಶ್ವರ ದೇವಸ್ಥಾನ, ಜಯನಗರದ ಈಶ್ವರ ಗುಡಿ, ಶ್ರೀನಗರ ವೃತ್ತ ಸಮೀಪ ಶಿವಾಲಯ, ಕೊಪ್ಪದಕೇರಿ ಶಿವಾಲಯ, ಗಾಂಧಿನಗರದ ಈಶ್ವರ ದೇಗುಲ ಸಹಿತ ಎಲ್ಲ ದೇವಸ್ಥಾನಗಳಲ್ಲಿ ಪೂಜಾ ಕೈಂಕರ್ಯಗಳು ಜರುಗಿದವು. ಘಂಟಾನಾದಗಳು ಮೊಳಗಿದವು. ಭಕ್ತರಿಗೆ ಪ್ರಸಾದ ವ್ಯವಸ್ಥೆ ಇತ್ತು. ಭಜನೆ, ಗಾಯನ, ಸಂಗೀತ, ಕಾರ್ಯಕ್ರಮಗಳು ಜರುಗಿದವು.ಕೆಲವರು ಉಪವಾಸ ವ್ರತ ಮಾಡಿದರು. ಅಹೋರಾತ್ರಿ ಜಾಗರಣೆ ಮಾಡಿದರು. ಭಜನೆ ಮಾಡಿ ಶಿವನನ್ನು ಆರಾಧಿಸಿದರು.ಧಾರವಾಡದ ಮಹಾಂತ ನಗರದ ಶಂಕರಲಿಂಗೇಶ್ವರ ದೇಗುಲದಲ್ಲಿ ಪ್ರಾರ್ಥನೆ ಸಲ್ಲಿಸಿದರು